# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 75 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.09.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 75 • PRGI No:KARKAN/2023/88055 • VIJAYANAGARA • 15.09.2024 • Sunday • Page:04 • Rs:2








## ಮೈಕ್ರೋ ನ್ಯೂಸ್

### ಶಿವಾನುಭವ ಸಂಪದ-1165

**ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದಲ್ಲಿ ಸೆ.16 ರಂದು ಸಂಜೆ 7ಕ್ಕೆ, ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಶಿವಾನುಭವ ಸಂಪದ–1165 ನಡೆಯಲಿದೆ. ವಿಜಯನಗರ ಮಹಾವಿದ್ಯಾಲಯದ ಉಪನ್ಯಾಸಕಿ ಭಾರತಿ ಮಲ್ಲಿಕಾರ್ಜುನ ಅವರು ವಚನಗಳಲ್ಲಿ ಕೃಷಿಕಾಯಕದ ಮಹತ್ವ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಕಲ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಎಂದು ಶ್ರೀಮಠ ತಿಳಿಸಿದೆ.


ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


# ಆಯ್ಕೆ ಪಟ್ಟಿ ಪ್ರಕಟ, ಸರ್ಟಿಫಿಕೇಟ್ ಬಗ್ಗೆ ಸಂಶಯ : ತನಿಖೆಗೆ ಆಗ್ರಹ

## ಗ್ರಾಪಂ ಗ್ರಂಥಾಲಯ ಕೇಂದ್ರದ ಮೇಲ್ವಿಚಾರಕರ ಹುದ್ದೆಗೆ ಅನ್ಯರಾಜ್ಯದ ಸರ್ಟಿಪೀಕೇಟ್‌ಗೆ ಮಣೆ

**ಹಂಪಿ ಟೈಮ್ಸ್ ಕೊಟ್ಟೂರು**

ವಿಜಯನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯ 22 ಗ್ರಾಪಂ ಗಳ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಖಾಲಿ ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಗೊಂಡಿದ್ದು ಪ್ರಕ್ರಿಯೆ, ಈ ಆಯ್ಕೆ ಪಟ್ಟಿಯಲ್ಲಿ ಕೆಲವರು ಅನ್ಯ ರಾಜ್ಯದ ಲೈಬ್ರರಿ ಸೈನ್ಸ್ ಸರ್ಟಿಫಿಕೇಟ್ ಸಲ್ಲಿಸಿದ್ದಾರೆ ಈ ಸರ್ಟಿಫಿಕೇಟ್ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರ ತನಿಖೆ ಕೈಗೊಳ್ಳಬೇಕೆಂದು ಗುರುಬಸವರಾಜ್, ಈರಣ್ಣ ಹಾಗೂ ಕೊಟ್ರಗೌಡ ಆಗ್ರಹಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಮಾಸ್ಟರ್ ಆಫ್ ಡಿಗ್ರಿ (ಎಂ.ಲಿಬ್ ರೆಗ್ಯುಲರ್ ಕೋರ್ಸ್ ಮಾಡಿದವರನ್ನು ಮೊದಲು ಪರಿಗಣಿಸದೆ ಅನ್ಯ ರಾಜ್ಯಗಳಾದ ರಾಜ್ಯಸ್ಥಾನ, ಉತ್ತರಪ್ರದೇಶ, ಹರ್ಯಾಣ, ದೆಹಲಿ, ತಮಿಳು ನಾಡು ಅಣ್ಣ ಮಲೈ ಯುನಿವರ್ಸಿಟಿ ಹಾಗೂ ಇನ್ ಸ್ಟಿಟ್ಯೂಟ್ ಗಳಲ್ಲಿ ಸರ್ಟಿಫಿಕೇಟ್ ಪಡೆದವರನ್ನು ಆಯ್ಕೆ ಮಾಡಿದ್ದಾರೆ.

ಈ ಪಟ್ಟಿಯಲ್ಲಿರುವ ಬಹುತೇಕರು ದ್ವಿತೀಯ ಪಿಯುಸಿಯಲ್ಲಿ ಇಲ್ಲಿ ಅರ್ಜಿ ಸಲ್ಲಿಸಿದ ಉಳಿದವರ ಅಂಕಗಳಿಗಿಂತ ಕಡಿಮೆ ಅಂಕಗಳುಳ್ಳವರ ಹೆಸರು ಈ ಪಟ್ಟಿಯಲ್ಲಿವೆ ಮತ್ತು ಈ ಆಯ್ಕೆ ಪಟ್ಟಿಯಲ್ಲಿರುವ ಕೆಲ ಸರ್ಟಿಫಿಕೇಟ್ ಅವಲೋಕಿಸಿದರೆ ಇವು ಮೇಲ್ನೋಟಕ್ಕೆ ಸಂಶಯಕ್ಕೆ ಎಡೆಮಾಡುತ್ತಿವೆ.

ಈ ಹಿನ್ನೆಲೆ ಪ್ರಾಮಾಣಿಕವಾಗಿ ಅಭ್ಯಾಸ ಮಾಡದೆ, ಸರ್ಟಿಫಿಕೇಟ್‌ಗಳನ್ನು ಖರೀದಿಸಿರಬಹುದು ಎಂಬ ಬಗ್ಗೆ ಈ ಹುದ್ದೆಗೆ ಅರ್ಜಿಸಲ್ಲಿಸಿರುವ ಅನೇಕ ಅಭ್ಯರ್ಥಿಗಳಲ್ಲಿ ಮತ್ತು ಲೈಬ್ರರಿ ಸೈನ್ಸ್ ಮುಗಿಸಿದವರಲ್ಲಿ ಚರ್ಚೆಗಳಿದ್ದು, ಇಲ್ಲಿ ಕೋರ್ಸ್ ಸರ್ಟಿಫಿಕೇಟ್ ಸಲ್ಲಿಸಿದವರಿಗೆ ಪರೀಕ್ಷೆ ಕೈಗೊಳ್ಳುವ ಮೂಲಕ ಭ್ರಷ್ಟಾಚಾರ ತಡೆಗೆ ಪಾರದರ್ಶಕವಾಗಿ ಜಿಲ್ಲಾ ಪಂಚಾಯತಿ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ತನಿಖೆ ನಡೆಸುವಂತೆ ಒತ್ತಾಹಿಸಿದರು.

> **ವಿಜಯನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಪಂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಆಯ್ಕೆ ಪಟ್ಟಿಯಲ್ಲಿರುವ ಕೆಲ ಸರ್ಟಿಫಿಕೇಟ್ ಬಗ್ಗೆ ಹಾಗೂ ಆಯ್ಕೆ ಪ್ರಕ್ರಿಯೆ ಬಗ್ಗೆ ಸಂಶಯವಿದ್ದು ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರ ತನಿಖೆ ಕೈಗೊಂಡು ಅರ್ಹರಿಗೆ ನ್ಯಾಯ ದೊರಕಿಸಿಕೊಡಬೇಕು.**
> **– ಗುರುಬಸವರಾಜ್**
> ಎಂ.ಲಿಬ್ ಪದವಿದರ.

ತನಿಖೆಯಲ್ಲಿ ಇಲ್ಲಿ ಸಲ್ಲಿಸಿರುವ ಲೈಬ್ರರಿ ಸೈನ್ಸ್ ಕೋರ್ಸ್ ಸರ್ಟಿಫಿಕೇಟ್ ಗಳು ಮತ್ತು ಇದನ್ನು ಪಡೆದ ವಿಧಾನ ನಕಲಿ ಎಂದು ತಿಳಿದುಬಂದರೆ, ನಕಲಿ ಸರ್ಟಿಫಿಕೇಟ್ ತಯಾರಿಸಿದವರಿಗೂ ಹಾಗೂ ಇವುಗಳನ್ನು ಈ ಹುದ್ದೆಗೆ ಸಲ್ಲಿಸದವರಿಗೂ ಸೂಕ್ತ ಕಾನೂನು ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

# ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ ಶುಭ ಸಂದೇಶ

**ಹಂಪಿ ಟೈಮ್ಸ್ ಕೊಪ್ಪಳ**



ಜನತೆಗೆ ನಿತ್ಯ ಜೀವಪರ ಸಂದೇಶ ನೀಡುತ್ತ ಶ್ರೇಷ್ಠ ವಾಗ್ಮಿಗಳು, ಜೀವಪರ ಚಿಂತಕರು ಎಂದೇ ಜಾಗತಿಕವಾಗಿ ಹೆಸರಾದ ಕೊಪ್ಪಳ ಜಿಲ್ಲೆಯ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮೀಜಿಯವರು, ಸೆ.15ರಂದು ನಡೆಯಲಿರುವ ಐತಿಹಾಸಿಕ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆಯ ಮಾನವ ಸರಪಳಿ ಕಾರ್ಯಕ್ರಮದ ಬಗ್ಗೆ ಕೊಪ್ಪಳ ಜಿಲ್ಲೆಯ ಜನತೆಗೆ ಸಂದೇಶ ರವಾನಿಸಿದ್ದಾರೆ.

'ಮನುಷ್ಯ ಸ್ವಭಾವತಃ ಸಂತೋಷ ಮತ್ತು ಸ್ವಾತಂತ್ರ್ಯವನ್ನು ಬಯಸುತ್ತಾನೆ. ಭಾರತ ದೇಶವು ನಮಗೆಲ್ಲರಿಗೂ ಸಂತೋಷದಿಂದ ಬದುಕಲು ಅವಕಾಶ ಕೊಟ್ಟರೆ, ಸಂವಿಧಾನವು ಸ್ವೇಚ್ಛೆಯಿಲ್ಲದ ಸ್ವಾತಂತ್ರ್ಯವನ್ನು ಕೊಟ್ಟಿದೆ. ಭಾರತದ ತ್ರಿವರ್ಣ ಧ್ವಜದ ಅಡಿಯಲ್ಲಿ ಹಿಂದೆ, ಇಂದು, ಮುಂದು ನಾವೆಲ್ಲರೂ ಒಂದೇ ಎನ್ನುವ ಪ್ರಜಾಪ್ರಭುತ್ವದ ತತ್ವವು ನಮ್ಮೆಲ್ಲರ ಅಂತರಂಗದಲ್ಲಿ ಬೆಳಗಲಿ, ಮಾನವ ಸರಪಳಿ ಮಹಾತ್ಕಾರ್ಯವು ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇವೆ. ಎಂದು ನಾಡ ಪ್ರಸಿದ್ಧ ಶ್ರೀ ಗವಿಸಿದ್ಧೇಶ್ವರ ಸಂಸ್ಥಾನ ಶ್ರೀ ಗವಿಮಠದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳು ಕೊಪ್ಪಳ ಜಿಲ್ಲೆಯ ಜನತೆಗೆ ಶುಭ ಸಂದೇಶ ನೀಡಿದ್ದಾರೆ.




## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

# ಸಮಾಜ ವಿಜ್ಞಾನ ಅಧ್ಯಾಯ 5 :

# ಸಾಮಾಜಿಕ ಧಾರ್ಮಿಕ ಸುಧರಣಾ ಚಳುವಳಿಗಳು

**1 ಸಮಾಜ ಸುಧಾರಕರು–ಸಂಸ್ಥೆ ಸ್ಥಾಪಕರು/ ನಾಯಕರು– ಚಳುವಳಿಗಳು**

| ಸ್ಥಾಪಕರು/ನಾಯಕರು | ಸಂಸ್ಥೆ/ಚಳುವಳಿ |
|---|---|
| 1) ರಾಮ್ ಮೋಹನ್ ರಾಯ್ | ಬ್ರಹ್ಮ ಸಮಾಜ |
| 2) ದಯಾನಂದ ಸರಸ್ವತಿ | ಆರ್ಯ ಸಮಾಜ |
| 3) ಆತ್ಮಾರಾಂ ಪಾಂಡುರಂಗ | ಪ್ರಾರ್ಥನಾ ಸಮಾಜ |
| 4) ಜ್ಯೋತಿಭಾಪುಲೆ | ಸತ್ಯಶೋಧಕ ಸಮಾಜ |
| 5) ಸ್ವಾಮಿ ವಿವೇಕಾನಂದ | ರಾಮಕೃಷ್ಣ ಮಿಷನ್ |
| 6) ಪೆರಿಯಾರ್ | ಆತ್ಮಗೌರವ ಚಳವಳಿ |
| 7) ಡಿರೋಜಿಯೋ | ಯುವ ಬಂಗಾಳ ಚಳುವಳಿ |
| 8) ಸರ್ ಸೈಯದ್ ಅಹಮದ್ ಖಾನ್ | ಅಲಿಘರ್ ಚಳುವಳಿ |
| 9) ಶ್ರೀ ನಾರಾಯಣಗುರು | ಧರ್ಮ ಪರಿಪಾಲನ ಯೋಗಂ |
| 10) ಆನಿಬೆಸೆಂಟ್ | ಹೋಂರೂಲ್ ಚಳುವಳಿ |

**2) ಗ್ರಂಥ/ಪತ್ರಿಕೆ –ಕರ್ತೃ**

| ಗ್ರಂಥ/ಪತ್ರಿಕೆ | ಕರ್ತೃ |
|---|---|
| 1) ಸತ್ಯಾರ್ಥ ಪ್ರಕಾಶ | ದಯಾನಂದ ಸರಸ್ವತಿ |
| 2) ಗುಲಾಮಗಿರಿ | ಜ್ಯೋತಿಭಾ ಫುಲೆ |
| 3) ಸಂವಾದ ಕೌಮುದಿ | ರಾಮ್ ಮೋಹನ್ ರಾಯ್ |
| 4) ರಿವೋಲ್ಟ್ | ಪೆರಿಯಾರ್ |
| 5) ನ್ಯೂ ಇಂಡಿಯಾ & ಕಾಮನ್ ವ್ಹೀಲ್ | ಅನಿಬೆಸೆಂಟ್ |

**3) "ಭಾರತೀಯ ನವೋದಯದ ಜನಕ" ಎಂದು ಯಾರನ್ನು ಕರೆಯಲಾಗಿದೆ?**
ಉತ್ತರ:– ರಾಮ್ ಮೋಹನ್ ರಾಯ್

**4) ಸತಿ ಸಹಗಮನ ಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೆ ತಂದವರು ಯಾರು?**
ಉತ್ತರ:– ಲಾರ್ಡ್ ವಿಲಿಯಂ ಬೆಂಟಿಂಕ್

**5) "ವೇದಗಳಿಗೆ ಹಿಂದಿರುಗಿ"/ಭಾರತೀಯರಿಗೇ ಭಾರತ ಎಂಬ ಘೋಷಣೆ ನೀಡಿದವರುಯಾರು?**
ಉತ್ತರ:– ದಯಾನಂದ ಸರಸ್ವತಿ

**6) ಥಿಯೋಸಾಫಿಕಲ್ ಸೊಸೈಟಿ ಸ್ಥಾಪಕರು ಯಾರು?**
ಉತ್ತರ:– ಮೇಡಂ ಬ್ಲಾವಟಸ್ಕಿ ಮತ್ತು ಕರ್ನಲ್ ಎಚ್.ಎಸ್. ಅಲ್ಕಾಟ್

**7) ಜ್ಯೋತಿಬಾ ಪುಲೆ ಅವರ ತತ್ವಗಳಿಂದ ಪ್ರಭಾವಿತರಾದವರು ಯಾರು?**
ಉತ್ತರ:– ಡಾ. ಅಂಬೇಡ್ಕರ್

**8) ವೇದಗಳಿಗೆ ಹಿಂತಿರುಗಿ ಎಂದು ಕರೆಕೊಟ್ಟವರು ಯಾರು?**
ಉತ್ತರ:– ದಯಾನಂದ ಸರಸ್ವತಿ

**9) ಸ್ವಾಮಿ ವಿವೇಕಾನಂದರು ರಾಮಕಷ್ಣ ಮಿಷನ್ ಸ್ಥಾಪಿಸಿದ ಉದ್ದೇಶವೇನು?**
ಉತ್ತರ:– ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳನ್ನು ಪ್ರಚಾರ ಪಡಿಸಲು ಸ್ಥಾಪಿಸಿದರು.

**10) ಸತಿ ಸಹಗಮನ ನಿಷೇಧ ಕಾಯ್ದೆ ಜಾರಿಗೆ ತಂದವರು ಯಾರು ?**
ಉತ್ತರ:– ಲಾರ್ಡ್ ವಿಲಿಯಂ ಬೆಂಟಿಂಕ್

**11) ಅನಿಬೇಸೆಂಟರ ಕೊಡುಗೆಗಳನ್ನು ತಿಳಿಸಿ.**
* ಥಿಯೋಸಾಫಿಕಲ್ ಸೊಸೈಟಿಗೆ ಹೊಸ ಚೈತನ್ಯ ನೀಡಿದರು.
* ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು.
* ಸಮಾನತೆ & ಸಹೋದರತೆ ಸಾಧಿಸಲು ಪ್ರಯತ್ನಿಸಿದರು.
* ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಿದರು.
* ಕೇಂದ್ರಿಯ ಹಿಂದೂ ಕಾಲೇಜು ಸ್ಥಾಪನೆ.
* ನ್ಯೂ ಇಂಡಿಯಾ ಪತ್ರಿಕೆ ಪ್ರಾರಂಭಿಸಿದರು.
  1916 ರಲ್ಲಿ ಹೋಂ ರೂಲ್ ಲೀಗ್ ಚಳುವಳಿಯನ್ನು ಆರಂಭಿಸಿದರು.
* ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷತೆವಹಿಸಿದ್ದರು

**12) ಭಾರತದ ಇತಿಹಾಸದಲ್ಲಿ 19ನೇಯ ಶತಮಾನವನ್ನು'ಭಾರತೀಯ ಪುನರುಜ್ಜೀವನ ಕಾಲ' ಎಂದು ಕರೆಯಲಾಗಿದೆ. ಏಕೆ?**
ಉತ್ತರ:– * ಪಾಶ್ಚಿಮಾತ್ಯ ನಾಗರೀಕತೆಯ ಸಂಪರ್ಕ ಬೆಳೆಯಿತು.
* ಇಂಗ್ಲಿಷ್ ಶಿಕ್ಷಣದ ಆರಂಭವಾಯಿತು.
* ವೈಚಾರಿಕತೆಯ ಬೆಳವಣಿಗೆಯು ಮೂಢನಂಬಿಕೆಗಳನ್ನು ಪ್ರಶ್ನಿಸಲು ನೆರವಾಯಿತು.
* ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆಯ ತತ್ವಗಳ ಪರಿಚಯವಾಯಿತು.
* ಪಾಶ್ಚಿಮಾತ್ಯ ಶಿಕ್ಷಣದಿಂದ ಅನೇಕ ಪ್ರಭಾವಿತರಾದರು.
* ರಾಮ್ ಮೋಹನರಾಯ್‌ರಂತ ಅನೇಕ ಸಮಾಜ ಸುಧಾರಕರು ಚಳುವಳಿ ಆರಂಭಿಸಿದರು.

**13) ರಾಮಕೃಷ್ಣ ಮಿಷನ್‌ನ ದೃಷ್ಟಿಕೋನ ವಿವರಿಸಿ.**
ಉತ್ತರ:– ಸಮಾಜ ಸೇವೆ ಮಾಡುವುದು
* ಪ್ರಾರ್ಥನೆ ಮತ್ತು ಯೋಗಕ್ಕೆ ಮಹತ್ವ ನೀಡುವುದು.
* ಎಲ್ಲಾ ಪಂಥಗಳನ್ನು ಸಮಾನವಾಗಿ ಕಾಣುವುದು
* ಆಧ್ಯಾತ್ಮದ ಸಾಕ್ಷಾತ್ಕರ.
* ಮೂರ್ತಿ ಪೂಜೆಯಲ್ಲಿ ನಂಬಿಕೆ ಇಡುವುದು.
* ನಿಸ್ವಾರ್ಥ ದೈವಭಕ್ತಿ ಬೆಳೆಸುವುದು.

**14) ಬ್ರಹ್ಮ ಸಮಾಜ / ಆರ್ಯ ಸಮಾಜ /ಪ್ರಾರ್ಥನಾ ಸಮಾಜ/ ಸತ್ಯಶೋಧಕ ಸಮಾಜ / ರಾಮಕೃಷ್ಣ ಮಿಷನ್/ ಅಲಿಘರ್ ಚಳುವಳಿಯ ಉದ್ದೇಶಗಳು/ ತತ್ವಗಳು / ಬೋಧನೆಗಳು ಯಾವುವು?**
ಉತ್ತರ:– 1. ಬಾಲ್ಯವಿವಾಹಕ್ಕೆ ವಿರೋಧ 2. ಸತಿಪದ್ಧತಿಗೆ ವಿರೋಧ 3. ಬಹುದೇವತಾರಾಧನೆಗೆ ವಿರೋಧ 4. ಮೂಢನಂಬಿಕೆಗೆ ವಿರೋಧ 5. ಜಾತಿಪದ್ಧತಿಗೆ ವಿರೋಧ 6. ಬಹುಪತ್ನಿತ್ವ ಪದ್ದತಿಗೆ ವಿರೋಧ 7. ವಿಧವಾ ವಿವಾಹಕ್ಕೆ ಪ್ರೋತ್ಸಾಹ 8. ಏಕತಾದೇವತಾರಾಧನೆಗೆ ಪ್ರೋತ್ಸಾಹ 9. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ 10. ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ 11. ಸ್ವದೇಶಿ ವಸ್ತುಗಳ ಬಳಕೆಗೆ ಪ್ರೋತ್ಸಾಹ 12.ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹ (ಯಾವುದಾದರು 8 ರಿಂದ 10 ಅಂಶಗಳನ್ನು ಬರೆಯಬಹುದು)

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**


## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಭವಿಷ್ಯ ಯೋಚಿಸಿದರೆ ಭಯ

ತುಂಗಭದ್ರಾ ಜಲಾಶಯ ವಿಷಯದಲ್ಲಿ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ತೀರಾತೀರ ತಾತ್ಸಾರ ಮಾಡುತ್ತಿದ್ದಾರೆಂದು ಅನಿಸುತ್ತೆ. ಆಗಸ್ಟ್ 10ರಂದು ಜಲಾಶಯದ ಕ್ರಸ್ಟ್‌ಗೇಟ್ ಕಳಚಿಬಿದ್ದಿದ್ದ ವಿಷಯವೊಂದನ್ನೇ ನಾವಿಲ್ಲಿ ಹೇಳುತ್ತಿಲ್ಲ. ಬದಲಿಗೆ ಭವಿಷ್ಯದ ಕುರಿತಾಗಿ ಯೋಚನೆ ಮಾಡಿದರೆ ಭಯ–ಆತಂಕ ಎದುರಾಗುತ್ತದೆ. ಏಕೆಂದರೆ ತುಂಗಭದ್ರಾ ಜಲಾಶಯದ ಆಯುಷ್ಯವೇ 100 ವರ್ಷ ಎಂದು ಆಗ ಜಲಾಶಯ ನಿರ್ಮಾಣ ಮಾಡಿದ ಇಂಜಿನಿಯರ್‌ಗಳೇ ಹೇಳಿದ್ದಾರೆ.

ನೆನಪಿರಲಿ ಈಗಾಗಲೇ ಜಲಾಶಯಕ್ಕೆ 70 ವರ್ಷಗಳು ತುಂಬಿವೆ. ಮುಂದೇನು ಎಂದು ಯೋಚನೆ ಮಾಡಿದಾಗ ನಿಜವಾಗಿಯೂ ಆತಂಕ ಹುಟ್ಟಿಸುತ್ತದೆ. ಮುಂದಿನ ಮೂವತ್ತು ವರ್ಷಗಳ ನಂತರ ಮಾಡಬೇಕಾದ ಪರ್ಯಾಯ ಕೆಲಸವನ್ನು ಈಗಾಗಲೇ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ಆರಂಭಿಸಬೇಕಿತ್ತು. ಮೂವತ್ತು ವರ್ಷಗಳ ನಂತರ ಪರ್ಯಾಯ ಕ್ರಮ ಆರಂಭಿಸಿದರೆ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರಂತೆ' ಎಂಬ ಗಾದೆ ಮಾತು ನೆನಪಾಗುತ್ತದೆ. ಅಸಲಿಗೆ ಪರ್ಯಾಯ ಕ್ರಮದ ಬಗ್ಗೆ ಯೋಚನೆಯಾದರೂ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ಮಾಡಿದ್ದಾರಾ ಎಂಬ ಅನುಮಾನ ಮೂಡಿದೆ. ಪರ್ಯಾಯವಾಗಿ ಮತ್ತೊಂದು ಜಲಾಶಯ ನಿರ್ಮಾಣವಾಗಲಿ, ಸಮಾನಾಂತರ ಜಲಾಶಯ ಕೆಲಸಗಳಾಗಿ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳ ಯೋಚನೆಗೇ ಬಂದಿಲ್ಲ.

ಈಗಾಗಲೇ ಸಮಾನಾಂತರ ಜಲಾಶಯವನ್ನು ಕೊಪ್ಪಳ ಜಿಲ್ಲೆಯ ನವಲಿ ತಾಲೂಕಿನಲ್ಲಿ ಮಾಡುವುದಾಗಿ ಹೇಳಿರುವ ಸರ್ಕಾರಗಳು ಹತ್ತು ವರ್ಷ ಕಳೆದರೂ ಅದರ ಬಗ್ಗೆ ಬಿಟ್ಟಿ ಭಾಷಣ ಮಾಡುತ್ತಿದ್ದಾರೆಯೇ ವಿನ ಗಂಭೀರ ಕ್ರಮವಾಗಲಿ, ಅನುಮೋದನೆಯಾಗಲಿ, ಪ್ಲಾ?ನ್ ಆಗಲಿ ಇನ್ನೂ ಕೈಗೊಳ್ಳದಿರುವುದು ದುರಂತವೇ ಸರಿ. ಒಮ್ಮೆ ಯೋಚನೆ ಮಾಡಿ, ಮುಂದಿನ ಮೂವತ್ತು ವರ್ಷ ಅಥವಾ ಅದಕ್ಕಿಂತ ಹತ್ತು ವರ್ಷ ಕಾಲ ತುಂಗಭದ್ರಾ ಜಲಾಶಯ ಬಾಳಿಕೆ ಬರುತ್ತದೆ ಎಂದು ಕೊಳ್ಳೋಣ. ಆನಂತರ ಏನು ? ಇದೇ ನೀರನ್ನು ನಂಬಿರುವ ಕೃಷಿಕರ ಗತಿಯೇನು ? ಆಹಾರದ ಭದ್ರತೆ ಏನು ? ಕುಡಿವ ನೀರಿಗೆ ಪರ್ಯಾಯ ಕ್ರಮವೇನು ? ಪ್ರಾಣಿ ಪಕ್ಷಿಗಳ ಕತೆಯೇನು ? ಪರಿಸರದ ಉಳಿವು ಹೇಗೆ ? ಎಂಬೆಲ್ಲದರ ಬಗ್ಗೆ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಯೋಚನೆ ಇದೆಯೋ ಅಥವಾ ಇಲ್ಲವೋ ಎಂಬ ಅನುಮಾನ ಮೂಡುತ್ತದೆ.



ಒಂದು ವೇಳೆ ಇಲ್ಲವಾದರಲ್ಲಿ ಭವಿಷ್ಯದಲ್ಲಿ ಉಂಟಾಗುವ ಬರಗಾಲಕ್ಕೆ ಈಗಿರು ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳೇ ನೇರ ಹೊಣೆಯಾಗುತ್ತಾರೆ. ಇವರಿಗೆ ಭವಿಷ್ಯದ ಮಕ್ಕಳು ಶಾಪ ಹಾಕುವುದಂತೂ ನಿಶ್ಚಿತ. ಕೊನೇ ಪಕ್ಷ ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ಈಗಿರುವ ಡ್ಯಾಂನಲ್ಲಿ ಹೂಳು ತೆಗೆಯುವ ಬಗ್ಗೆಯಾದರೂ ಯೋಚನೆ ಮಾಡುತ್ತಿಲ್ಲ. ಪ್ರತಿ ವರ್ಷ ಅರ್ಧ ಟಿಎಂಸಿ ಅಡಿ ಹೂಳು ಜಲಾಶಯದಲ್ಲಿ ಸೇರುತ್ತಿದೆ. ಈಗಾಗಲೇ 28 ಟಿಎಂಸಿ ಅಡಿ ಹೂಳು ಸಂಗ್ರಹವಾಗಿದೆ. ಇನ್ನು ಮೂವತ್ತು ವರ್ಷದಲ್ಲಿ 15 ಟಿಎಂಸಿ ಅಡಿ ಹೂಳು ಸಂಗ್ರಹವಾಗುತ್ತದೆ. ಆಗ ಜಲಾಶಯದಲ್ಲಿ ಉಳಿಯುವ ನೀರಿನ ಮಟ್ಟ ಕೇವಲ 90 ಟಿಎಂಸಿ ಅಡಿಯಾಗುತ್ತದೆ. ಸಕಾಲಕ್ಕೆ ಪ್ರತಿ ವರ್ಷ ಮಳೆಯಾಗುತ್ತಿದ್ದರೆ ಡ್ಯಾಂ ಭರ್ತಿಯಾಗುತ್ತದೆ. ಇಲ್ಲವಾದರಲ್ಲಿ ಬರೀ ಹೂಳಿನಿಂದ ಕೂಡಿರುತ್ತದೆ. ಸರ್ಕಾರ, ಅಧಿಕಾರಿಗಳು, ಜನಪ್ರತಿನಿಧಿಗಳು ಈಗಲಾದರೂ ಎಚ್ಚೆತ್ತುಕೊಳ್ಳಲಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಕವಿಗಳ ಸಾಹಿತಿಗಳ ವಿರಕ್ತರ ಶರಣರ ದಾಸರ ನೆಲೆನಾಡು ಹಂಪಿ



ಕರ್ನಾಟಕದ ಮಹತ್ವಪೂರ್ಣ ಸಾಹಿತ್ಯಿಕ ಸಾಂಸ್ಕೃತಿಕ ನೆಲೆಗಳಲ್ಲಿ ಅತ್ಯಂತ ಪ್ರಮುಖವಾದದ್ದು ಹಂಪಿ. ಹಂಪಿಯ ನೆಲದಲ್ಲಿ ಸುಮಾರು ಕ್ರಿಸ್ತಶಕ 1 ರಿಂದ 2ನೇ ಶತಮಾನದ ಎರಡು ಶಾಸನಗಳು ಲಭ್ಯವಾಗಿರುವುದರಿಂದ ಈ ನೆಲದ ಚರಿತ್ರೆ ಅತಿ ಪ್ರಾಚೀನವಾದ ಚರಿತ್ರೆ ಇದೆ. ಹಂಪಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅಷ್ಟೇ ಅಲ್ಲ, ಇದಕ್ಕಿಂತ ಪೂರ್ವದಲ್ಲೇ ಈ ನೆಲದಲ್ಲಿ ಸಾಹಿತ್ಯ ರಚನೆಗೊಂಡಿವೆ. ವಿಶೇಷವಾಗಿ ವಿಜಯನಗರದ ಅರಸರ ಆಡಳಿತದ ಕಾಲದಲ್ಲಿ ನೂರಾರು ಕವಿಗಳು, ಸಾಹಿತಿಗಳು, ಪಂಡಿತರು, ಶರಣರು, ವಿರಕ್ತರು, ದಾಸ ಶ್ರೇಷ್ಠರು ಹಾಗೂ ರಾಜರುಗಳಿಂದ ನೂರಾರು ಸಾಹಿತಿಕ ಕೃತಿಗಳು ರಚನೆಗೊಂಡಿವೆ.

ಇಡೀ ಕರ್ನಾಟಕದಲ್ಲೇ ಒಂದು ಪ್ರದೇಶಕ್ಕೆ ಸೀಮಿತವಾಗಿ ನೆಲೆಗೊಂಡ ಕವಿಗಳ, ಪಂಡಿತರು, ಸಾಹಿತಿಗಳ ಸಾಹಿತ್ಯ ಕೃತಿಗಳು ಹಂಪಿಯ ನೆಲದಲ್ಲಿ ರೂಪುಗೊಂಡಿದ್ದು ಮತ್ಯಾವ ನೆಲದಲ್ಲೂ ಕಾಣಲು ಸಾಧ್ಯವಿಲ್ಲ. ಹೀಗಾಗಿ ಹಂಪಿ ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ, ಸಾಮ್ರಾಜ್ಯದಲ್ಲಿ ಹಾಗೂ ಸಾಮ್ರಾಜ್ಯದ ನಂತರವೂ ತನ್ನದೇ ಆದ ಸಾಹಿತಿಕ ಸಾಂಸ್ಕೃತಿಕ ಚರಿತ್ರೆಯನ್ನು ಹೊಂದಿದೆ. ಹಂಪಿ ಪರಿಸರ ಕೇವಲ ಕನ್ನಡ ಸಾಹಿತ್ಯಕ್ಕೆ ಅಷ್ಟೇ ಸೀಮಿತ ಗೊಂಡಿಲ್ಲ. ಕನ್ನಡ ಸಾಹಿತ್ಯ, ಸಂಗೀತ, ಕಲೆ, ಪರಂಪರೆ ಹಾಗೂ ಸಂಸ್ಕೃತ, ತೆಲುಗು, ತಮಿಳು ಹೀಗೆ ಹಲವು ಭಾಷೆಗಳ ಕೃತಿಗಳು ಈ ನೆಲದಲ್ಲಿ ರಚನೆಗೊಂಡಿರುವುದು ವಿಶಿಷ್ಟವಾದದ್ದಾಗಿದೆ. ಇಷ್ಟೇ ಅಲ್ಲ ಈ ನೆಲದಲ್ಲಿ ಆಳ್ವಿಕೆ ನಡೆಸಿದ ವಿಜಯನಗರದ ಸಾಮ್ರಾಜ್ಯದ ಅಷ್ಟೊ ದೊರೆಗಳು ಕಲೆ, ಸಾಹಿತ್ಯ ಸಂಗೀತಕ್ಕೆ ಅತ್ಯಂತ ಮಹತ್ವದ ರಾಜಶ್ರಯವನ್ನು ನೀಡಿ ಪ್ರೋತ್ಸಾಹಿಸಿದ್ದರು. ಕೆಲ ರಾಜರುಗಳು ಸಹ ಕೃತಿಗಳನ್ನು ರಚಿಸಿರುವುದು ಮತ್ತೊಂದು ವಿಶೇಷವಾಗಿದೆ. ಹಂಪಿಯ ನೆಲದ ಕವಿಗಳು ಪಂಡಿತರು ವಿರಕ್ತರು ದಾಸರ ಮೊದಲಾದವರ ಕುರಿತು ಒಂದಷ್ಟು ಮಾಹಿತಿ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ:** 9449654489

Scan For Digital Colourful
HAMPI TIMES E-paper

ನಾವು ಹಂಪಿಯನ್ನು ವಿಜಯನಗರಕ್ಕೆ ಸೀಮಿತ ಗೊಳಿಸಿ ನೋಡುತ್ತಿದ್ದೇವೆ. ಆದರೆ ಹಂಪಿಯಲ್ಲಿ ವಿಜಯನಗರ ಸ್ಥಾಪನೆಗಿಂತ ಮುಂಚೆ ಕ್ರಿಸ್ತಶಕ ಒಂದರಿಂದ ಎರಡನೇ ಶತಮಾನದ ಮೂರು ಬ್ರಾಹ್ಮಿ ಶಾಸನಗಳು ಈ ಪ್ರದೇಶದಲ್ಲಿ ಅಂದರೆ ಅರಮನೆ ಪ್ರದೇಶದ ಆವರಣದಲ್ಲಿ ದೊರೆತಿವೆ. ಈ ಶಾಸನಗಳೆ ಈ ಪ್ರದೇಶದಲ್ಲಿ ದೊರೆತ ಅತಿ ಪ್ರಾಚೀನ ಶಾಸನಗಳು ಹೀಗಾಗಿ ಹಂಪಿಯ ಚರಿತ್ರೆ ಕ್ರಿಸ್ತಶಕ 1–2ನೇ ಶತಮಾನದಿಂದ ಪ್ರಾರಂಭಗೊಳ್ಳುತ್ತದೆ.

ಮುಂದೆ ಕ್ರಿ.ಶ. 5 ರಿಂದ 7ನೇ ಶತಮಾನದಲ್ಲಿ ಹಂಪಿಯಲ್ಲಿದ್ದ ಮಾತಂಗ ಮುನಿ ರಚಿಸಿದ ಬೃಹತ್ ಸಂಸ್ಕೃತದ ಗ್ರಂಥ ಬೃಹದ್ದೇಶಿ ರಚನೆಗೊಂಡಿತು ಎಂದರೆ ಆಶ್ಚರ್ಯವಾಗಬಹುದು. ಹೌದು ಭರತನ ನಾಟ್ಯ ಶಾಸ್ತ್ರವನ್ನು ಬಿಟ್ಟರೆ ಸಂಗೀತದಲ್ಲಿ ಬಹು ಪ್ರಾಚೀನವಾದ ಗ್ರಂಥ ಬೃಹದ್ದೇಶಿ. ಈ ಗ್ರಂಥವು ಹಂಪಿಯಲ್ಲಿ ರಚನೆಗೊಂಡ ಮೊದಲನೇ ಗ್ರಂಥ ಎನ್ನಲಾಗಿದೆ. ಅಲ್ಲಿಂದ ಪ್ರಾರಂಭಗೊಂಡು ಹಂಪಿಯ ಹರಿಹರ ರಾಘವಾಂಕರಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವರೆಗೂ ಬಂದು ನಿಲ್ಲುತ್ತದೆ.

## ನಾಡಿನ ಸಾಂಸ್ಕೃತಿಕ ರಾಜಧಾನಿ ಹಂಪಿ ಘೋಷಣೆಗೆ ಬೇಕಿದೆ ಸರ್ಕಾರದ ಇಚ್ಛಾಶಕ್ತಿ

**ಕ್ರಿಸ್ತಶಕ ಒಂದು ಮತ್ತು ಎರಡನೇ ಶತಮಾನದಿಂದ ಪ್ರಾರಂಭಗೊಂಡ ಹಂಪಿಯ ಚರಿತ್ರೆ ಇವತ್ತಿನವರೆಗೂ ಬಂದು ನಿಲ್ಲುತ್ತದೆ. ಇಷ್ಟು ಸುಧೀರ್ಘ ಸಾಹಿತಿಕ ಸಾಂಸ್ಕೃತಿಕ ಧಾರ್ಮಿಕ ರಾಜಕೀಯ ಚರಿತ್ರೆಯನ್ನು ಹೊಂದಿರುವ ಹಂಪಿ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ವಿಶಿಷ್ಟವಾದದ್ದು. ವಿಶೇಷವಾಗಿ ವಿಜಯನಗರದ ಸಾಮ್ರಾಜ್ಯದ ಆಡಳಿತದಲ್ಲಿ ಇದು ಉತ್ಕೃಷ್ಟವಾಗಿತ್ತು. ಈ ಎಲ್ಲ ಚರಿತ್ರೆಯನ್ನು ನೋಡಿದಾಗ ಇದನ್ನು ವಿಜಯನಗರ ಸಾಮ್ರಾಜ್ಯ ಎಂದು ಕರೆಯುವುದಕ್ಕಿಂತ ಕರ್ನಾಟಕದ ಸಾಮ್ರಾಜ್ಯ ಎಂದು ಕರೆಯುವುದು ಹೆಚ್ಚು ಸೂಕ್ತವೆಂದು ತಜ್ಞರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಹಂಪಿಯನ್ನು ಈ ನಾಡಿನ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯುವುದು ಹೆಚ್ಚು ಸೂಕ್ತವಾಗಿದೆ. ರಾಜಕೀಯದ ರಾಜಧಾನಿ ಬೆಂಗಳೂರು, ಸಾಂಸ್ಕೃತಿಕ ರಾಜಧಾನಿ ಮೈಸೂರೆಂದು ಹಳೆ ಮೈಸೂರಿನವರು ಕರೆಯುತ್ತಾರೆ ಆದರೆ ಉತ್ತರ ಕರ್ನಾಟಕದ ಹಂಪೆ ಇಡೀ ದಕ್ಷಿಣ ಭಾರತದ ಸಾಂಸ್ಕೃತಿಕ ಕೇಂದ್ರ ಹೀಗಾಗಿ ಹಂಪಿಯನ್ನು ಈ ನಾಡಿನ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಬೇಕೆಂದು ಒತ್ತಾಯಿಸುತ್ತಿದ್ದ ಎಂಪಿ ಪ್ರಕಾಶ್ ಅವರ ವಿಚಾರ ನ್ಯಾಯಯುತವಾಗಿದೆ.**

**ಹಂಪಿಯನ್ನು ನಾಡಿನ ಸಾಂಸ್ಕೃತಿಕ ರಾಜಧಾನಿ ಎಂದು ಅಧಿಕೃತವಾಗಿ ಸರ್ಕಾರ ಘೋಷಿಸುವಂತೆ ಈ ಭಾಗದ ಜನರು ಹೋರಾಟ ಮಾಡಬೇಕಾದ ಅವಶ್ಯವಿದೆ.**

ಕನ್ನಡ ಸಾಹಿತ್ಯವನ್ನು ಹೊಸ ದಿಕ್ಕಿಗೆ ಹೊರಳಿಸಿದವ ಹರಿಹರ (ಕ್ರಿ.ಶ.1200–1250) ಎಂದಿದ್ದಾರೆ ವಿದ್ವಾಂಸರು. ರಾಜರುಗಳನ್ನು ಹಾಡಿ ಹೊಗಳಿ ಬರೆಯುತ್ತಿದ್ದ ಕಾಲಘಟ್ಟದಲ್ಲಿ ಹರಿಹರನು ಅದಕ್ಕೆ ಪ್ರತಿಯಾಗಿ ದೈವದ ನೆಲೆಯಲ್ಲಿ ಶಿವನನ್ನು ಶಿವನ ಭಕ್ತರನ್ನು ಕುರಿತು ಸಾಹಿತ್ಯ ರಚನೆ ಮಾಡಿದ್ದು ವಿಶೇಷವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಗಳೆ ಛಂದಸ್ಸು, ಷಟ್ಪದಿ ಎಂಬ ದೇಶಿ ಪರಂಪರೆಯನ್ನು ಪರಿಚಯಿಸಿಕೊಟ್ಟ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಹರಿಹರನ ಶಿವಶರಣರ ರಗಳೆಗಳು ಶಿವಭಕ್ತರ ರಗಳೆಗಳು ಸಂಕೀರ್ಣ ರಗಳೆಗಳು ಚಂಪು ಕಾವ್ಯ ಶತಕ ಸಾಹಿತ್ಯ ಮೊದಲಾದವು ಹಂಪಿಯ ನೆಲದಲ್ಲಿ ಕುರಿತು ರಚನೆಗೊಂಡಿದ್ದವು. ನಂತರ ರಾಘವಾಂಕ ಕುಮಾರವ್ಯಾಸ ಕಾವ್ಯಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂದಿಗೂ ಮೇರು ಕೃತಿಗಳಾಗಿವೆ.

### ಹಂಪಿಯಲ್ಲಿದ್ದ ಕವಿಗಳು

ಮಾತಂಗ ಮುನಿ, ಹರಿಹರ, ರಾಘವಾಂಕ, ಕರಸ್ಥಳದ ವೀರಣ್ಣೊಡೆಯ, ಕಲ್ಮಠದ ಪ್ರಭುದೇವ, ಕುಮಾರ ಬಂಕನಾಥ, ಗುಣ ಮಧುರ, ಗುಣ ಬಸವ, ಗುರುಬಸವ ಬಸುವಾಚಾರ್ಯ ಚಂದ್ರಕವಿ ಚಾಮರಸ, ಜಕ್ಕಣಾಚಾರ್ಯ, ತಿಮ್ಮಣ್ಣ, ತಿಮ್ಮರಸ, ದೇವರಾಜ, ತಿಮ್ಮಣ್ಣ, ರಾಜನಾಥ, ಪರ್ವತ ದೇವ, ಪ್ರೌಢದೇವರಾಯ, ಬತ್ತಲೇಶ್ವರ, ಮಗ್ಗಿಯ ಮಾಯಿದೇವ, ಪಂಡಿತ ಕಲ್ಲರಸ, ಲಕ್ಕಣ್ಣ ದಂಡೇಶ ಮಹಾಲಿಂಗ ದೇವ, ಮಧುರ, ಸಿದ್ದನಂಜೇಶ, ದೂರ್ಜಟ, ನಂದಿ ತಿಮ್ಮಣ್ಣ, ನರಹರಿ ತೀರ್ಥ, ಡಿಂಡಿಮ ರಾಜನಾಥ, ರಾಮಭದ್ರ ಶಾಂತಲಿಂಗದೇಶಿಗ, ಶಿವಕವಿ ಲಿಂಗ, ಶ್ರೀಪಾದರಾಜ, ಶ್ರೀಗಿರೀಂದ್ರ, ಸಾಯಣ, ಸಾಳವ ನರಸಿಂಹ, ಕೃಷ್ಣದೇವರಾಯ. ಕೃಷ್ಣದೇವರಾಯ ಆಸ್ಥಾನದ ಅಷ್ಟದಿಗ್ಗಜರುಗಳಾದ ಅಲ್ಲಸಾನಿ ಪೆದ್ದಣ್ಣ, ತಿಮ್ಮಣ್ಣ, ತೆನಾಲಿ ರಾಮಕೃಷ್ಣ, ವಿಜಯನಗರದ ವೀರಕಂಪನ ಹೆಂಡತಿ ಗಂಗಾದೇವಿ ಸೇರಿದಂತೆ ಇನ್ನಿತರ ಕವಿಗಳು ಇದ್ದರು

### ನೂರೊಂದು ವಿರಕ್ತರು

ಕರಸ್ಥಲದ ನಾಗಿದೇವ, ಗುರುಬಸವ, ಹೊನ್ನಿದೇವ, ಹೇಡಿಯ ಮರುಳ, ಟಗರ ಕಾಳಗದ ಪ್ರಭು, ಬಾಲಲಿಂಗಣ್ಣ, ಬತ್ತಲೇಶ, ಕುದುರೆ ಶಾಂತ, ಮಂಟದ ಶಾಂತೇಶ, ಮದ್ದಳೆ ಶಾಂತ, ಗುಡುಗುಡಿಕೆ ಶಾಂತ, ಡಂಗುರ ಶಾಂತ, ಖಂಡಣಿ ಶಾಂತ, ಸಾಣೆ ಬಂಡೆಯ ಶಾಂತ, ಮದ್ದಾನೆ ಶಾಂತ, ಸಿಂಗಾಡಿಯ ಶಾಂತ, ಚಕ್ರದ ಶಾಂತ, ಬೊಂಬೆ ಕಟ್ಟಿ ಮೆರೆಸುವ ಶಾಂತ, ಜಟ್ಟಿ ಶಾಂತ, ವೀರ ಶಾಂತ, ದೊಂಬರ ಶಾಂತ, ಗುರುಬಸವೇಶ್ವರ ಶಾಂತ, ನಿಂಬೆರಗಿನ ಶಾಂತ, ರುದ್ರ ಭೂಮಿಯ ಶಾಂತ, ಬಣ್ಣ ಗದ್ದುಗೆ ಶಾಂತ, ರುದ್ರ ಮೂರ್ತಿ ಶಾಂತ, ಭದ್ರಕಾಳಿ ಶಾಂತ, ಇದ್ದಲಿ ಶಾಂತ, ಬಯಲ ಶಾಂತ, ಮಡಿವಾಳ ಶಾಂತ, ಬಿಡುಗಡೆ ಶಾಂತ ಮೊದಲಾದವರು ಹೀಗೆ ನೂರೊಂದು ವಿರಕ್ತರು ಹಂಪಿಯಲ್ಲಿದ್ದವರು.

### ದಾಸರು

ದಾಸ ಪರಂಪರೆ ನೆಲ ಹಂಪಿ. ದಾಸ ಪರಂಪರೆಯಲ್ಲಿ ಬರುವ ಪ್ರಮುಖ ಯತಿಗಳೆಂದರೆ ಶ್ರೀಪಾದರಾಯರು ವ್ಯಾಸರಾಯರು ವಾದಿರಾಜರು ಮೊದಲಾದವರು ದಾಸರಂದು ಪ್ರಸಿದ್ಧಿ ಪಡೆದ ಪುರಂದರದಾಸರು ಕನಕದಾಸರು ವಿಜಯದಾಸರು ಗೋಪಾಲ ದಾಸರು ಜಗನ್ನಾಥದಾಸರು ಮೊದಲಾದ 130ಕ್ಕೂ ಹೆಚ್ಚು ದಾಸ ಶ್ರೇಷ್ಠರು ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಈ ದಾಸ ಪರಂಪರೆ ಕೇಂದ್ರ ಹಂಪಿಯೇ ಆಗಿತ್ತು ಎನ್ನುವುದು ವಿಶೇಷವಾಗಿದೆ. ಕೃಷ್ಣದೇವರಾಯನ ಆಡಳಿತದಲ್ಲಿದ್ದ ವ್ಯಾಸರಾಯರು ಅರಮನೆಯ ಗುರುಗಳಾಗಿ ಕೃಷ್ಣದೇವರಾಯನಿಗೆ ಮಾರ್ಗದರ್ಶನ ಮಾಡಿದ್ದವರು. ವೈಷ್ಣವ ಧಾರ್ಮಿಕ ಸಾಹಿತ್ಯಕ್ಕೆ ಕೃಷ್ಣದೇವರಾಯ ಸಂಪೂರ್ಣ ಪ್ರೋತ್ಸಾಹ ಬೆಂಬಲ ನೀಡಿದ್ದ ಹಾಗಾಗಿ ಅನೇಕ ಕೃತಿಗಳು ರಚನೆಯಾದ ಲೋಲ್ಲಲಕ್ಷ್ಮೀಧರನು ಸರಸ್ವತಿ ವಿಲಾಸ ಯೋಗ ದೀಪಿಕಾ ಮುಂತಾದ ಗ್ರಂಥಗಳನ್ನು ರಚಿಸಿದನು. ವೇದ ಸಾಹಿತ್ಯಕ್ಕೆ ವ್ಯಾಖ್ಯಾನ ಟೀಕೆಗಳು ರಚನೆಯಾದವು ಆದ್ದರಿಂದಲೇ ಕಟ್ಟು ಗ್ರಂಥವ ತುಂಗಭದ್ರ ತೀರಕ್ಕೆ ಎಂಬ ನುಡಿ ಜನಪ್ರಿಯವಾಗಿತ್ತು.

ಕನ್ನಡ, ಸಂಸ್ಕೃತ ತೆಲುಗು ಕವಿಗಳಲ್ಲದೆ ತಮಿಳಿನ ಕವಿ ಮಂಜರಿಪ್ಪಾ ದ್ರಾವಿಡ ಕಾವ್ಯ ರಚಿಸಿದ್ದಾನೆ. ಕುಮಾರಸ್ವಾಮಿ ಸರಸ್ವತಿ ಎಂಬ ಮತ್ತೊಬ್ಬ ತಮಿಳು ಕವಿ ಶ್ಲೋಕಗಳನ್ನು ರಚಿಸಿದ್ದಾನೆ.ಮಂಡಲ ಪುರುಷನೆಂಬ ಜೈನ ಕವಿ ಚುಡಾಮಣಿ ಎಂಬ ದ್ರಾವಿಡ ನಿಘಂಟನ್ನು ರಚಿಸಿದ್ದಾನೆ. ಹೀಗೆ ನಾಲ್ಕು ಭಾಷೆಗಳಲ್ಲಿ ಹಂಪಿಯಲ್ಲಿ ರಚಿಸಲ್ಪಟ್ಟಿವೆ ಎಂದರೆ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯನ ಆಡಳಿತದ ಕಾಲದಲ್ಲಿ ಕಲೆ ಸಾಹಿತ್ಯ ಸಂಸ್ಕೃತಿಗೆ ಪಂಡಿತರಿಗೆ ಶರಣರಿಗೆ ವಿಶೇಷವಾದ ಸ್ಥಾನಮಾನಗಳು ಇದ್ದವು. ಸಾಹಿತ್ಯಕ್ಕೆ ರಾಜಾಶ್ರಯ ಅಲ್ಲದೆ ಶಾಸನದಲ್ಲಿ ಮಠ ಒಂದರಲ್ಲಿ ಪುರಾಣ ಹೇಳುತ್ತಿದ್ದ ಉಪಾಧ್ಯಾಯರಿಗೆ ದಾನ ಕೊಟ್ಟಿದ್ದು, 13ನೇ ಶತಮಾನದ ಶಾಸನದಲ್ಲಿ ವಿವಾಹ ಪುರಾಣ ಮತ್ತು ಅಮೃತಮಥನ ಪುರಾಣಗಳನ್ನು ಒಳಗೊಂಡಿವೆ. ಈ ಸಾಹಿತ್ಯ ಕೃತಿ ಶಿವ ಪಾರ್ವತಿಯರ ವಿವಾಹದ ಕಥೆಯನ್ನು ವಿವರಿಸಿದರೆ, ಸೂರರು ಮತ್ತು ಅಸುರರು ಅಮೃತವನ್ನು ಪಡೆಯಲು ಸಮುದ್ರವನ್ನು ಕಡೆದ ಕಥೆಯನ್ನು ಮತ್ತೊಂದು ಶಾಸನ ಹೇಳುತ್ತದೆ ಈ ಶಾಸನವು ಕನ್ನಡದಲ್ಲಿದ್ದು ಆನೆಗೊಂದಿಯಲ್ಲಿದೆ.

# ವಿಜಯನಗರ ಜಿಲ್ಲೆಯಲ್ಲಿ ಹಬ್ಬದ ಸಂಭ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಹಿನ್ನೆಲೆಯಲ್ಲಿ ಸೆ.15ರಂದು ವಿಜಯನಗರ ಜಿಲ್ಲೆಯಲ್ಲಿ ಅಂದಾಜು 40ಕ್ಕಿಂತ ಹೆಚ್ಚು ಕಿ.ಮೀ. ರಚನೆಯಾಗಲಿರುವ ಮಾನವ ಸರಪಳಿಗೆ ಅಗತ್ಯ ಏರ್ಪಾಡಾಗಿದ್ದು, ಹೊಸಪೇಟೆ ನಗರ ಸೇರಿದಂತೆ ಜಿಲ್ಲೆಯ ಎಲ್ಲೆಡೆ ಊರ ಹಬ್ಬದ ಸಂಭ್ರಮ ಮನೆ ಮಾಡಿದೆ.

ಅಂದು ಬೆಳಗ್ಗೆ ಟಿ.ಬಿ.ಡ್ಯಾಮ್ ನ ಮೊದಲನೇ ಸೇತುವೆಯಿಂದ ಆರಂಭವಾಗಿ ಭುವನಹಳ್ಳಿ ಗ್ರಾಮದವರೆಗೆ ನಡೆಯಲಿರುವ ಮಾನವ ಸರಪಳಿ ಮಾರ್ಗದುದ್ದಕ್ಕೂ ಅಚ್ಚುಕಟ್ಟಾಗಿ ನಂಬರಗಳನ್ನು ನಮೂದಿಸಲಾಗಿದ್ದು, ಆಯಾ ಕಡೆಗಳಲ್ಲಿ ಮೇಲ್ವಿಚಾರಣೆಗಾಗಿ ಶಿಸ್ತುಬದ್ಧವಾಗಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸೆ.14ರಂದು ವಿವಿಧ ಇಲಾಖೆಯ ಅಧಿಕಾರಿಗಳು ಮತ್ತೊಮ್ಮೆ ಆಯಾ ಕಡೆಗೆ ಸಂಚರಿಸಿ ಮಾರ್ಗಸಿದ್ಧತೆಯ ಬಗ್ಗೆ ಖಚಿತಪಡಿಸಿಕೊಂಡರು.




ಮಾನವ ಸರಪಳಿಯ ಮಾರ್ಗದೆಲ್ಲೆಡೆ ಬಾವುಟಗಳನ್ನು ಅಳವಡಿಸಲಾಗಿದೆ. ಕೆಲ ಕಡೆಗೆ ಕಮಾನುಗಳನ್ನು ಹಾಕಲಾಗಿದೆ. ಕಾರ್ಯಕ್ರಮದಲ್ಲಿ ಸಾರ್ವಜನಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಲು ಪ್ರಚಾರಕ್ಕಾಗಿ ಅಲ್ಲಲ್ಲಿ ಬ್ಯಾನರ್ ಅಳವಡಿಸಲಾಗಿದೆ.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಹತ್ತಾರು ಸಭೆಗಳು ನಡೆದಿವೆ. ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್. ಸೇರಿದಂತೆ ಇನ್ನೀತರ ಅಧಿಕಾರಿಗಳ ತಂಡವು ಹತ್ತಾರು ದಿನಗಳಿಂದ ಯುದ್ಧೋಪಾದಿಯಲ್ಲಿ ಕಾರ್ಯಕ್ರಮದ ಸಿದ್ಧತೆಯನ್ನು ನಡೆಸಿದ್ದು, ಅಧಿಕಾರಿಗಳ ತಂಡವು ಉತ್ತಮವಾಗಿ ಕಾರ್ಯನಿರ್ವಹಿಸಿದ್ದರಿಂದಾಗಿ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಿದ್ಧತೆ ಪೂರ್ಣಗೊಂಡಿದೆ.

ಜಿಲ್ಲೆಯಲ್ಲಿ ಪ್ರಜಾಪ್ರಭುತ್ವ ದಿನದ ಮಾನವ ಸರಪಳಿ ಕಾರ್ಯಕ್ರಮದ ಯಶಸ್ವಿಗಾಗಿ ನಿರಂತರವಾಗಿ ಸಭೆಗಳನ್ನು ನಡೆಸಿ ಮಾರ್ಗದರ್ಶನ ಮಾಡಿದ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು, ಸಿಇಒ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಶಾ ಅವರು ರಜಾ ದಿನವಾದ ಶನಿವಾರ ಸಹ ಅಧಿಕಾರಿಗಳಿಗೆ ಸಂದೇಶ ಕಳುಹಿಸಿ ಅಂತಿಮ ಹಂತದ ಸಿದ್ಧತೆಯನ್ನು ಪರಿಶೀಲಿಸಿದರು.

ಕಾರ್ಯಕ್ರಮದ ವಿವರ: ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಸೆ.15ರಂದು ಬೆಳಗ್ಗೆ 9.15ಕ್ಕೆ ಹೊಸಪೇಟೆಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮುಖ್ಯ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9.15ರಿಂದ 9.25ರವರೆಗೆ ಗಣ್ಯರಿಂದ ಮಾನವ ಸರಪಳಿ ರಚಿಸಲಾಗುತ್ತದೆ. ಬಳಿಕ ಗಣ್ಯರು ವೇದಿಕೆಗೆ ಆಗಮಿಸುವರು. 9.30ಕ್ಕೆ ನಾಡಗೀತೆ, ಸ್ವಾಗತ, ಪ್ರಾಸ್ತಾವಿಕ ನುಡಿ., 9.40ಕ್ಕೆ ಕಾರ್ಯಕ್ರಮದ ಉದ್ಘಾಟನೆ, ಮಹಾನ್ ನಾಯಕರುಗಳಿಗೆ ಪುಷ್ಪನಮನ., 9.45ರಿಂದ ಸಂವಿಧಾನ ಪೀಠಿಕೆ ವಾಚನ., 9.50ರಿಂದ ಗಣ್ಯರ ಭಾಷಣ, ಬೆಳಗ್ಗೆ 10 ಗಂಟೆಗೆ ಮಾನವ ಸರಪಳಿಯಲ್ಲಿ ಕೈಕೈ ಹಿಡಿದು ನಿಲ್ಲುವುದು., 10.02ಕ್ಕೆ ಮಾನವ ಸರಪಳಿಯಲ್ಲಿ ಎರಡೂ ಕೈಗಳನ್ನು ಮೇಲೆತ್ತಿ ಜೈ ಹಿಂದ್ ಜೈ ಕರ್ನಾಟಕ ಎಂದು ಘೋಷಣೆ ಕೂಗುವುದು ಬಳಿಕ 10.5ಕ್ಕೆ ರಾಷ್ಟ್ರಗೀತೆ ನಡೆಯಲಿದೆ.

ಕವಿ ಮನಸು

## ಸಂಜೆ ಮಲ್ಲಿಗೆ



ಅನುದಿನ ಬಾನಲಿ ಸೂರ್ಯನ ನಡೆಯನು
ಮನನವ ಮಾಡುತ ಅರಿತು
ದಿನಕರ ಪಶ್ಚಿಮ ದಿಕ್ಕಿಗೆ ಸರಿಯುವ
ತನಕವು ಸುಮ್ಮನೆ ಕುಳಿತು

ಬಳಿಕವೆ ಗಿಡದಲಿ ಅರಳುವೆ ಚಂದದಿ
ಕಳೆಯನು ತುಂಬುವೆ ಗಿಡಕೆ
ಮಳೆಯನು ಸಹಿಸುವೆ ಚಳಿಯಲು ಅರಳುವೆ
ತಿಳಿಯುವ ಕಾತರ ಮನಕೆ

ರವಿಯನು ಕಂಡರೆ ಭಯವನು ಪಡುವೆಯ
ತವಕದಿ ಕೇಳುವೆ ನಿನಗೆ
ಸವಿಯದೆ ಬೆಳಗಿನ ಹೊನ್ನಿನ ಕಿರಣವ
ಕವಿದಿದೆ ಸಂಶಯ ನನಗೆ

ಬಿರಿದರೆ ಗಿಡದಲಿ ಬೆಳಗಿನ ವೇಳೆಗೆ
ದೊರೆಯುವೆ ಪೂಜೆಗೆ ಸತ್ಯ
ಹರಿಯನು ಸೇರಲು,ನಾರಿಯು ಮುಡಿಯಲು
ಅರಳೆಯ ಉದಯದಿ ನಿತ್ಯ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಬರೆಯಲೇನ ಒಲವ ಓಲೆ



ಬರೆಯಲೇನ ಒಲವ ಓಲೆ
ನವಿರಾದ ನಿನ್ನ ಬೆನ್ನ ಮೇಲೆ
ಲೇಖನಿಯಲಿ ತುಂಬಲೇನ
ಅಳಿಸಲಾಗದ ಶಾಯಿಯನ್ನ

ಬಳಸಲೇನ ನಿನ್ನ ನಡುವ
ಲತೆಯು ಮರವ ಹಬ್ಬಿದಂತೆ
ಎನಗೆ ನೀನು ನಿನಗೆ ನಾನು
ಒಂದೇ ನಾಣ್ಯದ ಮುಖಗಳಂತೆ

ತೋರು ನೀನು ನಿನ್ನ ವದನ
ಒಮ್ಮೆ ನೋಡಿ ಧನ್ಯನಾಗುವೆ
ಒಲವ ಮಂಜು ಹರಿದು ಬರಲಿ
ಪ್ರೇಮ ಸಾಗರದಿ ನಿನ್ನಳೊಂದಾಗುವೆ

ನನ್ನೆದೆಯಂಗಳ ಬಲು ವಿಸ್ತಾರ
ಬರೆಯ ಬಾರಾ ಒಲವ ಚಿತ್ತಾರ
ನಮ್ಮ ಬಾಳು ತುಂಬಾ ಶೃಂಗಾರ
ನೀಲ ಮೇಘದಂತೆ ಅಮರ

ಅಳುವುದಾದರೆ ಮನಬಿಚ್ಚಿ ಅತ್ತುಬಿಡು
ಬತ್ತಿ ಹೋಗಲಿ ದುಃಖದಾ ಮಡು
ನಗುವುದಾದರೆ ಮನಸಾರೆ ನಕ್ಕುಬಿಡು
ನವೋಲ್ಲಾಸ ಝರಿಗೆ ನಾಂದಿ ಹಾಡು

– ಕೆ ಎಂ ಬಸವರಾಜ ಹೊಸಪೇಟೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಒಂದು ದೇಶದ ಆಡಳಿತವು ಆ ದೇಶದ ಎಲ್ಲಾ ನಾಗರಿಕರ ಸಮಾನ ಸಹಭಾಗಿತ್ವದೊಂದಿಗೆ ಸಾಗುವುದನ್ನು ನಾವು 'ಪ್ರಜಾಪ್ರಭುತ್ವ' ಎಂದು ಕರೆಯಬಹುದು. ಅಮೆರಿಕಾದ ಹಿಂದಿನ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರು ಹೇಳಿದಂತೆ 'ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ'.

ಲೋಕವಾಣಿಯೇ ದೇವವಾಣಿ' ಎಂಬಂತಹ ಪರಿಕಲ್ಪನೆಯನ್ನು ಹೊಂದಿರುವ ಪ್ರಜಾಪ್ರಭುತ್ವದಲ್ಲಿ ಆಳುವವರು ಮತ್ತು ಆಳಲ್ಪಡುವವರು ಪ್ರಜೆಗಳೇ. ಯಾವುದೇ ಜಾತಿ, ಮತ, ಪಂಥ, ಬಡವ, ಶ್ರೀಮಂತ ಎಂಬ ಭೇದವಿಲ್ಲದೆ ಸರ್ವರಿಗೂ ಸಮಾನವಾದ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಕೊಡ ಮಾಡುವ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತೇವೆ.

ಈ ಮೊದಲು ರಾಜನ ಆಳ್ವಿಕೆಯನ್ನು, ಏಕ ಚಕ್ರಾಧಿಪತ್ಯವನ್ನು ಒಳಗೊಂಡಿದ್ದ ವಿಶ್ವದ ಬಹುತೇಕ ದೇಶಗಳಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಯೇ ಇರಲಿಲ್ಲ. 16ನೇ ಶತಮಾನದ ಅಂತ್ಯದ ಸುಮಾರಿಗೆ ಅರಸೊತ್ತಿಗೆಗಳು ತಮ್ಮ ಬಲವನ್ನು ಕಳೆದುಕೊಳ್ಳುತ್ತಾ ಬಂದಂತೆ ಪ್ರಜಾಪ್ರಭುತ್ವದ ಕುರಿತಾದ ಯೋಜನೆಗಳು ರಾಜಕೀಯ ತಂತ್ರಜ್ಞರ, ಜ್ಞಾನಿಗಳ ಮನದಲ್ಲಿ ರೂಪುಗೊಳ್ಳಲಾರಂಭಿಸಿದವು.

ಪ್ರಜಾಪ್ರಭುತ್ವದಲ್ಲಿ ಎರಡು ವಿಧಗಳಿದ್ದು ಒಂದು ನೇರ ಪ್ರಜಾಪ್ರಭುತ್ವವಾದರೆ ಮತ್ತೊಂದು ಪರೋಕ್ಷ ಪ್ರಜಾಪ್ರಭುತ್ವ.

ನೇರ ಪ್ರಜಾಪ್ರಭುತ್ವದಲ್ಲಿ ಏಕಕಾಲದಲ್ಲಿ ಎಲ್ಲರನ್ನೂ ಒಂದೆಡೆ ಸೇರಿಸುವುದು, ಅಭಿಪ್ರಾಯ ಸಂಗ್ರಹಿಸುವುದು, ನಿರ್ವಹಿಸುವುದು ಕಷ್ಟಕರವಾದ್ದರಿಂದ, ಪರೋಕ್ಷ ಪ್ರಜಾಪ್ರಭುತ್ವಕ್ಕೆ ಹೆಚ್ಚಿನ ಮನ್ನಣೆ ದೊರೆತು ಜಗತ್ತಿನಾದ್ಯಂತ ಪರೋಕ್ಷ ಪ್ರಜಾಪ್ರಭುತ್ವವೇ ಜಾರಿಯಲ್ಲಿದೆ.

ಆಡಳಿತವು ಸುಗಮವಾಗಿ ಸಾಗಲು ಕುಗ್ರಾಮಗಳಿಂದ ಹಿಡಿದು ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಪ್ರಜೆಗಳಿಂದಲೇ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಪ್ರಜೆಗಳ ಪರವಾದ, ಅನುಕೂಲಕರವಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ಪ್ರಗತಿಗಾಗಿ ಕಾರ್ಯನಿರ್ವಹಿಸುವುದು ಪ್ರಜಾಪ್ರಭುತ್ವದ ಆಡಳಿತದ ವೈಖರಿ. ಇದಕ್ಕೆ ಸರಿಸಮನಾಗಿ ಸರ್ಕಾರದಿಂದ ನಿಯೋಜಿತಗೊಂಡ ನೌಕರರು, ವಿವಿಧ ಉದ್ದೇಶಗಳ ಕಚೇರಿಗಳು ಕೂಡ ಕಾರ್ಯನಿರ್ವಹಿಸುತ್ತದೆ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶದ ಮೂರು ಮುಖ್ಯ ಅಂಗಗಳಾಗಿವೆ.

ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಒಬ್ಬ ವ್ಯಕ್ತಿಯೇ ಆಗಲಿ ಕೆಲವು ವ್ಯಕ್ತಿಗಳೇ ಆಗಲಿ ಸ್ವೇಚ್ಛೆಯಾಗಿ ಆಳಲು ಎಡೆಯಿಲ್ಲ. ಪ್ರಜೆಗಳ ಪ್ರತಿನಿಧಿಗಳು ಪ್ರಜೆಗಳ ಹತೋಟಿಯೊಳಗೆ ಇರಬೇಕಾಗುತ್ತದೆ. ಇಂಥ ಹತೋಟಿಗಳನ್ನು ಪರಿಣಾಮಕಾರಕವಾಗಿಸಲು ಸಂವಿಧಾನದಲ್ಲಿ ಮತ್ತು ಶಾಸನಗಳಲ್ಲಿ ಸೂಕ್ತ ನಿರ್ದೇಶನಗಳಿರುತ್ತವೆ. ಸಂವಿಧಾನ ಹಾಗೂ ಕಾನೂನುಗಳ ಆಚೆಗೂ ಹಲವಾರು ಹತೋಟಿಗಳಿವೆ.

ಶಾಸಕಾಂಗದಲ್ಲಿ ನಾಡಿನ ಅಭಿವೃದ್ಧಿಗೆ ಬೇಕಾದ ಮತ್ತು ಪ್ರಜೆಗಳ ಉತ್ತಮ ಜೀವನ ನಿರ್ವಹಣೆಗೆ ಬೇಕಾಗುವ ಎಲ್ಲ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳುವ ಕುರಿತು ಚರ್ಚೆ, ಮಸೂದೆಗಳ ಮಂಡನೆ ಮತ್ತು ಅವುಗಳನ್ನು ಕಾನೂನು ಬದ್ಧ ಅನುಷ್ಠಾನಗೊಳಿಸುವ ವ್ಯವಸ್ಥೆ ಇದ್ದು ಕಾರ್ಯಾಂಗದ ವ್ಯಾಪ್ತಿಯಲ್ಲಿ ನಿರ್ವಹಿಸಲ್ಪಡುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ನ್ಯಾಯಾಂಗವು ಜನರನ್ನು ಶಿಸ್ತು ಬದ್ಧ ನಿಯಮಾವಳಿಗೆ ಒಳಪಡಿಸಿದ್ದು, ಎಲ್ಲರಿಗೂ ಸಮಾನ ಸಾಮಾಜಿಕ ನ್ಯಾಯದ ಅವಕಾಶವನ್ನು ನೀಡುತ್ತದೆ.

ಪ್ರಜಾಪ್ರಭುತ್ವದ ಮೂಲ ಸೂತ್ರಗಳು ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ, ರಾಜಕೀಯ ಮುಖಂಡತ್ವ ಮತ್ತು ಸಂಘ ಸಂಸ್ಥೆಗಳು, ಸಮರ್ಥ ಮುಖಂಡತ್ವ, ವ್ಯಕ್ತಿಗೌರವ ಮತ್ತು ಶಿಕ್ಷಣ, ತಾಳ್ಮೆ ಸಹಾನುಭೂತಿ ಮತ್ತು ಸಹಕಾರ, ಸಮಾನತೆ...ಒಂದು ರಾಷ್ಟ್ರವು ಪರಿಪೂರ್ಣವಾಗಿ ತನ್ನೆಲ್ಲ ಪ್ರಜೆಗಳಿಗೆ ಎಲ್ಲ ರಂಗಗಳಲ್ಲಿಯೂ ಅವಕಾಶಗಳನ್ನು ನೀಡಲೇಬೇಕು, ಸಮಾನತೆಯ ಹಕ್ಕುಗಳಿಗಾಗಿ ನಡೆದಿರುವ ಹೋರಾಟಗಳನ್ನು ಗಮನಿಸಿ ನೋಡಿದಾಗ ಒಂದು ರಾಷ್ಟ್ರದ ಶಕ್ತಿ ಮತ್ತು ಪರಮಾಧಿಕಾರವು ಸಮಾನತೆಯ ತಳಹದಿಯ ಮೇಲೆ ನಿಲ್ಲುತ್ತದೆ ಎಂಬುದು ನಿರೂಪಿತಗೊಂಡಿದ್ದು ಪ್ರಜಾಪ್ರಭುತ್ವದ ಮೂಲ ಸೂತ್ರ ಸಮಾನತೆಯಾಗಿದೆ.

ಸ್ವಾತಂತ್ರ್ಯ...ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪರಮಾಧಿಕಾರದಲ್ಲಿ ಪ್ರಜಾ ಸರ್ಕಾರದ ಅಂಗೀಕಾರದಲ್ಲಿ ಸ್ವಾತಂತ್ರ್ಯ ಗೋಚರವಾಗುತ್ತದೆ. ಸ್ವತ್ತಿನ ರಕ್ಷಣೆ, ವಾಕ್ ಮತ್ತು ಮುದ್ರಣ ಸ್ವಾತಂತ್ರ್ಯ ಇವು ಪೌರ ಸ್ವಾತಂತ್ರ್ಯದ ಅಂಶಗಳು. ಪಂಚಾಯಿತಿ ಸಭೆಯ ಸದಸ್ಯತ್ವದಿಂದ ಹಿಡಿದು ಮೇಲ್ಮಟ್ಟದವರೆಗೆ ಸರ್ಕಾರದೊಡನೆ ಸಹಕರಿಸುತ್ತ ರಾಜಕೀಯ ಸ್ವಾತಂತ್ರ್ಯವನ್ನು ವ್ಯಕ್ತಿ ಅನುಭವಿಸುತ್ತಾನೆ. ಸಹೋದರತ್ವ... ಪ್ರಜೆಗಳು ಪರಸ್ಪರ ಸಹೋದರ ಭಾವನೆ ಮತ್ತು ಸೌಹಾರ್ದತೆಯಿಂದ ಬದುಕಬೇಕು. ರಾಜಕೀಯ ಪಕ್ಷ ಮತ್ತು ಸಂಘ ಸಂಸ್ಥೆಗಳು.... ಸಾಮಾಜಿಕವಾಗಿ ಕಾರ್ಯನಿರ್ವಹಿಸಲು ಒಬ್ಬ ವ್ಯಕ್ತಿಯು ಯಾವುದೇ ರಾಜಕೀಯ ಪಕ್ಷವನ್ನಾಗಲಿ ಇಲ್ಲವೇ ಸಂಘ ಸಂಸ್ಥೆಗಳನ್ನಾಗಲಿ ಸೇರುವ ಸ್ವಾತಂತ್ರ್ಯ ಸಮರ್ಥ ಮುಖಂಡತ್ವ.... ಸಚ್ಚಾರಿತ್ರ್ಯ, ಸಜ್ಜನಿಕೆ ಮತ್ತು ಉತ್ತಮ ವಿಚಾರಧಾರೆಗಳನ್ನು ಹೊಂದಿದ್ದು ಜನರಿಗೆ ಒಳ್ಳೆಯ ನಾಯಕನಾಗುವ ವ್ಯಕ್ತಿತ್ವದವನು ಪ್ರಜೆಗಳ ಮುಖಂಡತ್ವವನ್ನು ವಹಿಸಬೇಕು. ಪ್ರಜಾಪ್ರಭುತ್ವದಲ್ಲಿ ಸ್ವಾರ್ಥ ಸಾಧನೆಗಿಂತ ಜನಸೇವಕನಾಗುವ ವ್ಯಕ್ತಿ ಮೌಲ್ಯಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿರಬೇಕು.

ವ್ಯಕ್ತಿಗೌರವ ಹಾಗೂ ಶಿಕ್ಷಣ.... ಪ್ರಜೆಗಳೇ ಪ್ರಜಾಪ್ರಭುತ್ವದ ಶಕ್ತಿ. ಶಿಕ್ಷಣದ ಮೂಲಕ ಜನರನ್ನು ದೇಶದ ಆಗುಹೋಗುಗಳು ಮತ್ತು ಸಾಮಾಜಿಕ ಆರ್ಥಿಕ ರಂಗಗಳಲ್ಲಿ ಒಳ್ಳೆಯ ಬೆಳವಣಿಗೆಗೆ ಮತ್ತು ಸಾಮಾಜಿಕ ಜಾಗೃತಿಯನ್ನು ಮೂಡಿಸುವುದು. ತಾಳ್ಮೆ ಸಹಾನುಭೂತಿ ಮತ್ತು ಸಹಕಾರ.... ಜಾತಿ ಮತ ಪಂಥ ಬಡವ ಬಲ್ಲಿದ ಎಂಬ ಭೇದಗಳಿಲ್ಲದೆ ಎಲ್ಲರೊಂದಿಗೆ ಸೌಹಾರ್ದ ಮತ್ತು ಸಾಮರಸ್ಯದೊಂದಿಗೆ ಜೀವನ ಸಾಗಿಸುವ ಸಾಮಾಜಿಕ ಪರಿಕಲ್ಪನೆ

ಈ ಮೂಲ ಪರಿಕಲ್ಪನೆಗಳು ಪ್ರಜಾಪ್ರಭುತ್ವವನ್ನು ಬಲಿಷ್ಠಗೊಳಿಸಿವೆ.

ಪ್ರಜಾಪ್ರಭುತ್ವದಲ್ಲಿ ಸರ್ಕಾರ ಜನತೆಗೆ ಹೊಣೆಯಾಗಿರುತ್ತದೆ. ಜನತಾ ಪ್ರತಿನಿಧಿಗಳಿಂದೊಡಗೂಡಿದ ಶಾಸನಾಂಗವನ್ನು ಧಿಕ್ಕರಿಸಿ ನಡೆದರೆ ಅಂಥ ಸರ್ಕಾರವನ್ನು ಅವಿಶ್ವಾಸದ ಗೊತ್ತುವಳಿಯ ಮೂಲಕ ಉರುಳಿಸಬಹುದು. ಮಂತ್ರಿಗಳು, ಅಧಿಕಾರಿಗಳು, ಶಾಸಕರು ಮನಬಂದಂತೆ ವರ್ತಿಸಲು ಅವಕಾಶವಿಲ್ಲ. ಹೊಣೆಗೆಟ್ಟ ಸರ್ಕಾರವನ್ನು ಜಾಗೃತ ಜನತೆಯೇ ದಾರಿಗೆ ತರಬೇಕಾಗುತ್ತದೆ.

ಪ್ರಜಾಪ್ರಭುತ್ವ ಯಾವುದೇ ವಿಶಿಷ್ಟ ವ್ಯಕ್ತಿ ಅಥವಾ ವರ್ಗಗಳ ಹಿತಕ್ಕಾಗಿ ಶ್ರಮಿಸುವುದಿಲ್ಲ. ಸರ್ವರಿಗೂ ಸಾಂವಿಧಾನಿಕ ರಕ್ಷಣೆ ಇದೆ. ಅದರಲ್ಲೂ ಸಾಮಾನ್ಯ ಜನರ ಏಳ್ಗೆಗಾಗಿ ಇದು ವಿಶೇಷವಾಗಿ ಗಮನ ನೀಡುತ್ತದೆ.

ವ್ಯಕ್ತಿತ್ವದ ಬೆಳವಣಿಗೆಗೆ ಇಂದು ಪೌರನಿಗೆ ಅನೇಕ ಬಗೆಯ ಸ್ವಾತಂತ್ರ್ಯಗಳು ಲಭ್ಯವಾಗಿವೆ. ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯಗಳನ್ನು ಪ್ರಜಾಪ್ರಭುತ್ವದಲ್ಲಿ ನಾಗರಿಕ ಪಡೆಯುತ್ತಾನೆ. ಎಲ್ಲರೂ ಕಾನೂನಿನ ಮುಂದೆ ಸಮಾನರು.ಜಾತಿ, ಧರ್ಮ, ಭಾಷೆ, ಲಿಂಗ ಹಾಗೂ ಪಕ್ಷ ಪಂಗಡಗಳ ಆಧಾರದ ಮೇಲೆ ಯಾವುದೇ ಪಕ್ಷಪಾತಕ್ಕೆ ಇಲ್ಲಿ ಎಡೆಯಿಲ್ಲ.



ಇಲ್ಲಿ ಹಿಂಸಾಚಾರ, ಬಲಪ್ರಯೋಗಗಳಿಗೆ ಸ್ಥಾನವಿಲ್ಲ. ಸರ್ಕಾರ ಜನತೆಯ ಮನವನ್ನು ಒಲಿಸುವುದರ ಮೂಲಕ, ಕಾರ್ಯಕ್ರಮಗಳನ್ನು ವಿವರಿಸಿ ಅವುಗಳನ್ನು ಅನುಷ್ಠಾನದಲ್ಲಿ ತರುವುದರ ಮೂಲಕ ಶಾಂತಿಯುತ ಪ್ರಗತಿಯನ್ನು ಸಾಧಿಸುತ್ತದೆ.

ಒತ್ತಾಯದ ಕೆಲಸ, ಗುಲಾಮಗಿರಿ, ಆರ್ಥಿಕ ಶೋಷಣೆಗಳಿಗೆ ಇಲ್ಲಿ ಆಸ್ಪದವಿಲ್ಲ. ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಚ್ಯುತಿ ಬರದಂತೆ ಜನ ಕಲ್ಯಾಣವನ್ನು ಪ್ರಜಾಪ್ರಭುತ್ವದಲ್ಲಿ ಸಾಧಿಸಲಾಗುತ್ತದೆ.

ಪ್ರಜಾಪ್ರಭುತ್ವದ ಧ್ಯೇಯ ಮತ್ತು ಆಶಯಗಳನ್ನು ಎತ್ತಿ ಹಿಡಿಯುವ ಮತ್ತು ಅದರ ಮಹತ್ವವನ್ನು ಸಾರುವ ನಿಟ್ಟಿನಲ್ಲಿ, ಜನಜಾಗೃತಿಯನ್ನು ಸೃಷ್ಟಿಸಲು ವಿಶ್ವಸಂಸ್ಥೆಯು 2007ರಲ್ಲಿ ಸಪ್ಟೆಂಬರ್ 15 ನೇ ದಿನವನ್ನು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿವಸ ಎಂದು ಆಚರಿಸಲು ನಿರ್ಧರಿಸಿತು. ಆದ್ದರಿಂದ ಪ್ರತಿ ವರ್ಷ ಸೆಪ್ಟೆಂಬರ್ 15ನ್ನು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಆಚರಿಸಲಾಗುತ್ತದೆ.

ಪ್ರಸ್ತುತ ವರ್ಷ ನಮ್ಮ ರಾಜ್ಯದಲ್ಲಿ ಮಾನವ ಸರಪಳಿಯನ್ನು ನಿರ್ಮಿಸುವ ಮೂಲಕ ಪ್ರಜಾಪ್ರಭುತ್ವದ ಮುಖ್ಯ ಮೌಲ್ಯಗಳಾದ ಸಮಾನತೆ ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳನ್ನು ಸಾರಲು ಎರಡುವರೆ ಸಾವಿರ ಕಿಲೋಮೀಟರ್ ಉದ್ದದ ಮಾನವ ಸರಪಳಿಯನ್ನು ನಿರ್ಮಿಸುವ ಮಹದಾಶಯವನ್ನು ರಾಜ್ಯಸರ್ಕಾರ ಹೊಂದಿದ್ದು, ಸುಮಾರು 25 ಲಕ್ಷ ಜನ ರಾಜ್ಯಾದ್ಯಂತ ಈ ಮಾನವ ಸರಪಳಿಯ ನಿರ್ಮಿಸುವ ಕಾರ್ಯದಲ್ಲಿ ಭಾಗಿಯಾಗಲಿದ್ದಾರೆ. ಎಲ್ಲ ಜಿಲ್ಲೆಗಳನ್ನು ಮಾನವ ಸರಪಳಿಯ ಮೂಲಕ ಒಂದುಗೂಡಿಸುವ ಈ ಕ್ರಿಯೆಯಲ್ಲಿ ಪ್ರತಿ ಒಂದು ಕಿಲೋಮೀಟರ್ ಗೆ ಸಾವಿರ ಜನರಂತೆ ಮಾನವ ಸರಪಳಿಯ ನಿರ್ಮಾಣ ಮಾಡುವ ಮೂಲಕ ಪ್ರಜೆಗಳಲ್ಲಿ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಕುರಿತು ಜಾಗೃತಿಯನ್ನು ಮತ್ತು ಪ್ರಜಾಪ್ರಭುತ್ವದ ಮೂಲ ಆಶಯಗಳು ಮತ್ತು ಧ್ಯೇಯಗಳನ್ನು ಬಿತ್ತರಿಸುವ ಭಿತ್ತಿ ಪತ್ರಗಳನ್ನು ಮತ್ತು ಬ್ಯಾನರ್ ಗಳನ್ನು ಪ್ರದರ್ಶಿಸಲಾಗುತ್ತದೆ. ರಾಜ್ಯದಾದ್ಯಂತ 10 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗುತ್ತದೆ. ಸರಕಾರಿ ಕಚೇರಿಗಳ ನೌಕರರು, ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಹೀಗೆ ಸಮಾಜದ ಎಲ್ಲ ವರ್ಗದ ಜನರು ಈ ಮಾನವ ಸರಪಳಿಯಲ್ಲಿ ಭಾಗವಹಿಸುವ ಮೂಲಕ ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ಆಶಯಗಳನ್ನು ಇಡೀ ಜಗತ್ತಿನಲ್ಲಿ ಮೊಳಗಿಸೋಣ ಎಂಬ ಆಶಯದೊಂದಿಗೆ.

# ಬಾಕಿ ಇರುವ ವ್ಯಾಜ್ಯಗಳ ಇತ್ಯರ್ಥಕ್ಕಾಗಿ ರಾಷ್ಟ್ರೀಯ ಲೋಕ–ಅದಾಲತ್ ಸಹಕಾರಿ

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೇ ನ್ಯಾ.ಕೆ.ಜಿ ಶಾಂತಿ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಸಾರ್ವಜನಿಕರು ಬಾಕಿ ಇರುವ ವ್ಯಾಜ್ಯಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥ ಮಾಡಿಕೊಳ್ಳಲು ಇಂದು (ಸೆ.14) ನಡೆಯುವ ರಾಷ್ಟ್ರೀಯ ಲೋಕಾ–ಅದಾಲತ್ ಸುವರ್ಣಾವಕಾಶವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ನ್ಯಾ.ಕೆ.ಜಿ ಶಾಂತಿ ಹೇಳಿದರು.

ರಾಷ್ಟ್ರೀಯ ಲೋಕ–ಅದಾಲತ್ ಕುರಿತು ನಗರದ ತಾಳೂರು ರಸ್ತೆ ನ್ಯಾಯಾಲಯದ ವಿಸಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಲೋಕಾ–ಅದಾಲತ್‌ನಲ್ಲಿ ಅಖಂಡ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ ಸೇರಿದಂತೆ 31 ನ್ಯಾಯಾಲಯಗಳಲ್ಲಿನ ಬಾಕಿ ಇರುವ 64,811 ಪ್ರಕರಣಗಳಲ್ಲಿ 12,438 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಹುದು ಎಂದು ಗುರುತಿಸಲಾಗಿತ್ತು. ಅವುಗಳಲ್ಲಿ ಕೆಲವು ದಿನಗಳಿಂದ ನ್ಯಾಯಾಧೀಶರು ಮತ್ತು ನ್ಯಾಯಾವಾಧಿ ಸಮಾಧಾನಕಾರರ ಸಮ್ಮುಖದಲ್ಲಿ ಕಾಳಜಿ ನ್ಯಾಯಾಲಯದ ಅಧಿಕಾರಿಗಳು ಮತ್ತು ಸಂಧಾನಕರರು ಕಕ್ಷಿದಾರರ ಮನವೊಲಿಸಿ 7,568 ಪ್ರಕರಣಗಳನ್ನು ರಾಜಿಗೆ ತೆಗೆದುಕೊಂಡು ಸಂಧಾನದ ಮೂಲಕ ಇತ್ಯರ್ಥಗೊಳಿಸಿದ್ದಾರೆ.

ಇಲ್ಲಿಯವರೆಗೂ 2,36,000 ಕ್ಕೂ ಹೆಚ್ಚಿನ ಪ್ರಕರಣ ಗಳನ್ನು ಇತ್ಯರ್ಥಗೊಳಿ ಸಲಾಗಿದ್ದು, ಇದ ರಿಂದ ಕಕ್ಷಿದಾರರು ನೆಮ್ಮದಿ ಜೀವನ ನಡೆಸುತ್ತಿ ದ್ದಾರೆ ಎಂದು ಹೇಳಿದರು.

ಇಂದು ನಡೆಯುವ ರಾಷ್ಟ್ರೀಯ ಲೋಕಾ–ಅದಾಲತ್‌ನಲ್ಲಿ ಹತ್ತು ಸಾವಿರ ಬಾಕಿ ಇರುವ ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸುವ ಆಶಯವಿದ್ದು, ಒಟ್ಟಾರೆಯಾಗಿ 2,60,000 ಪ್ರಕರಣಗಳು ರಾಜಿಯಾಗುವ ಉದ್ದೇಶ ಹೊಂದಲಾಗಿದೆ ಎಂದರು.

ನ್ಯಾಯಾಲಯದ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ಸೇರಿದಂತೆ ವಿವಿಧ ಇಲಾಖೆಯ ಸಹಕಾರದೊಂದಿಗೆ ಮುಂದಿನ ದಿನಮಾನಗಳಲ್ಲಿ ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಲು ಕಾರ್ಯಪ್ರವೃತ್ತರಾಗುತ್ತಾರೆ ಎಂದು ಹೇಳಿದರು.

ತ್ವರಿತ ನ್ಯಾಯಕ್ಕಾಗಿ ಕಕ್ಷಿದಾರರು ಮುತುವರ್ಜಿ ವಹಿಸಿಕೊಂಡು, "ರಾಷ್ಟ್ರೀಯ ಲೋಕ್ ಅದಾಲತ್" ನಲ್ಲಿ ಭಾಗವಹಿಸಿದರೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆ ಹರಿಸಿಕೊಂಡು ಸಾಮರಸ್ಯ ಜೀವನ ನಡೆಸಬಹುದು ಎಂದರು

ಇದೇ ವೇಳೆ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ನ್ಯಾ.ಕೆ.ಜಿ ಶಾಂತಿ ಅವರು ವ್ಯಾಜ್ಯ ವಿಚಾರಣೆ ನಡೆಯುವ ನ್ಯಾಯಲಯ ಕೊಠಡಿಗಳಿಗೆ ಖುದ್ದಾಗಿ ಭೇಟಿ ನೀಡಿ ವ್ಯಾಜ್ಯಗಳ ಪರಿಶೀಲನೆ ಮಾಡಿದರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆದ ರಾಜೇಶ್ ಎನ್. ಹೊಸಮನೆ ಉಪಸ್ಥಿತರಿದ್ದರು.

ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ., ಅಮರಾವತಿ
ಹೊಸಪೇಟೆ (ತಾ) ವಿಜಯನಗರ (ಜಿಲ್ಲೆ)

64ನೇ ವಾರ್ಷಿಕ ಮಹಾಸಭೆ ಅಹ್ವಾನ ಪತ್ರಿಕೆ

ಮಾನ್ಯ ಸದಸ್ಯ ಬಂಧುಗಳೇ,
ಸಂಘದ 2023–24ನೇ ಸಾಲಿನ ವಾರ್ಷಿಕ ಸಭೆಯನ್ನು, ದಿನಾಂಕ 19–09–2024 ರಂದು ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಬಿ.ಮೇಘನಾಥ ರವರ ಅಧ್ಯಕ್ಷತೆಯಲ್ಲಿ ಮಹಾಸಭೆ ಕರೆಯಲಾಗಿದೆ. ಕಾರಣ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ವಿನಂತಿ.

ದಿನಾಂಕ : 05–09–2024 — ಸಹಿ/– (ಹುಲಿಕುಂಟಪ್ಪ ಬಣಕಾರ)
ಸ್ಥಳ : ಅಮರಾವತಿ — ಮುಖ್ಯ ಕಾರ್ಯನಿರ್ವಾಹಕರು

ಸೂಚನೆ : – 1) ವಾರ್ಷಿಕ ಮಹಾಜನ ಸಭೆಯ ನೋಟಿಸ್ಸನ್ನು ಎಲ್ಲಾ ಸದಸ್ಯರಿಗೆ ಅಂಚೆ ಮುಖಾಂತರ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಇದನ್ನೆ ಆಮಂತ್ರಣ ಎಂದು ಭಾವಿಸಿ ಸಭೆಗೆ ಹಾಜರಾಗಲು ಕೋರಲಾಗಿದೆ.
2) ಪ್ರತಿ ಸದಸ್ಯರ ಸದಸ್ಯತ್ವಕ್ಕೆ ಷೇರು ಧನ ರೂ. 1000/– ಇರಬೇಕಾಗಿದ್ದು, ಷೇರು ಕಡಿಮೆ ಇರುವ ಸದಸ್ಯರು ಸಂಘಕ್ಕೆ ಭೇಟಿಯಾಗಿ ವ್ಯತ್ಯಾಸ ಷೇರು ಹಣವನ್ನು ಬೈಲಾ 11(4) ಪ್ರಕಾರ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ ದಿನಪತ್ರಿಕೆ
85 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**15–09–2024 – ಭಾನುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶ್ರಾವಣ |
| ಯೋಗ | : ಅತಿಗಂಡ |
| ಕರಣ | : ಭವ |
| ಸೂರ್ಯೋದಯ | : 06:14:38 |
| ಸೂರ್ಯಾಸ್ತ | : 18:29:00 |
| ರಾಹು ಕಾಲ | : 16:57–18:29 |
| ಯಮಘಂಡ ಕಾಲ | : 12:22–13:54 |
| ಗುಳಿಕ ಕಾಲ | : 15:25–16:57 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 14–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.97 ಅಡಿ |
| ಒಳ ಹರಿವು | 25060 ಕ್ಯುಸೆಕ್ |
| ಹೊರ ಹರಿವು | 21356 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.656 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1621.99 ಅಡಿ |
| ಒಳ ಹರಿವು | 1895 ಕ್ಯುಸೆಕ್ |
| ಹೊರ ಹರಿವು | 9940 ಕ್ಯುಸೆಕ್ |
| ಸಾಮರ್ಥ್ಯ | 67.080 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

COLD PRESSED OILS
HEALTH Benefits

- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ಅಂಬೇಡ್ಕರ್ ಕನಸಿನ ಪ್ರಜಾಪ್ರಭುತ್ವ

ಕರ್ನಾಟಕ ಸರಕಾರ ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನವಾದ ಇಂದು ಬೃಹತ್ ಮಾನವ ಸರಪಳಿ ಮಾಡುವ ಮೂಲಕ ಜನರಿಗೆ ಪ್ರಜಾಪ್ರಭುತ್ವದ ಆಶಯಗಳ ಮನವರಿಕೆ ಮಾಡುವ ಪ್ರಯತ್ನ ಮಾಡುತ್ತಿದೆ. ಭಾರತದ ದಮನಿತರ ಕಣ್ಣೋಟದ ಪ್ರಜಾಪ್ರಭುತ್ವದ ವ್ಯಖ್ಯಾನ ಮಾಡಿದವರು ಅಂಬೇಡ್ಕರ್. ಇದನ್ನು ಜಾಗತಿಕ ದಮನಿತ ಸಮುದಾಯಗಳ ನೆಲೆಯಲ್ಲಿಯೂ ವಿಸ್ತರಿಸಬಹುದು. ಈ ದೇಶದ ದಮನಿತ ಸಮುದಾಯಗಳ ಎದೆಗೆ ಪ್ರಜಾಪ್ರಭುತ್ವದ ಬೀಜ ಬಿತ್ತಿದವರೆ ಬಾಬಾ ಸಾಹೇಬರು. ಹಾಗಾಗಿ ಅಂಬೇಡ್ಕರ್ ಪ್ರಜಾಪ್ರಭುತ್ವದ ಬಗ್ಗೆ ಏನು ಯೋಚಿಸಿದರು? ಅಂಬೇಡ್ಕರ್ ಅರ್ಥೈಸುವ ಪ್ರಜಾಪ್ರಭುತ್ವದ ಸ್ವರೂಪ ಯಾವುದು ಎನ್ನುವುದನ್ನು ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ನೆಪದಲ್ಲಿ ಚರ್ಚೆ ಸಂವಾದ ಮಾಡಬೇಕಿದೆ.

ಜಾಗತಿಕವಾಗಿ ಕುಸಿಯುತ್ತಿರುವ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯುವುದು, ವಿಶ್ವದ ಶಾಂತಿಗಾಗಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಆಶಯವನ್ನು ಜಾಗತಿಕವಾಗಿ ಮನವರಿಕೆ ಮಾಡಲು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಸೆಪ್ಟಂಬರ್ 15 ನ್ನು ಅಂತರಾಷ್ಟ್ರೀಯ ದಿನವನ್ನಾಗಿ ಆಚರಿಸುವ ಘೋಷಣೆ ಮಾಡಿತು. ಇಂಟರ್ ಪಾರ್ಲಿಮೆಂಟರಿ ಯೂನಿಯನ್ (ಐಪಿಯು) 2008 ರಿಂದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಆಚರಣೆ ಆರಂಭಿಸಿತು. ಇದೀಗ ಜಾಗತಿಕವಾಗಿ ಅಂತರಾಷ್ಟ್ರೀಯ ದಿನವನ್ನಾಗಿ ಆಚರಿಸಲಾಗುತ್ತಿದೆ. ಫಿಲಿಫೈನ್ಸ್‌ನ ಜನಚಳವಳಿಯ ಹೋರಾಟಗಾರ್ತಿ ಕೊರಾಜನ್ ಸಿ.ಅಕ್ವಿನೋ 'ಪೀಪಲ್ ಪವರ್ ರೆವಲೂಷನ್' ಮೂಲಕ ಫರ್ಡಿನಾಂಡ್ ಮಾರ್ಕೋಸ್‌ನ 20 ವರ್ಷಗಳ ಸರ್ವಾಧಿಕಾರವನ್ನು ಕೊನೆಗೊಳಿಸಿ 1986 ರ ಸೆಪ್ಟಂಬರ್ 15 ರಂದು ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುತ್ತಾಳೆ. ಇದು ಗಂಡಿನ ವಿರುದ್ಧದ ಹೆಣ್ಣಿನ ವಿಜಯದ ಸಂಕೇತವೂ ಕೂಡ. ಹಾಗಾಗಿ ನಿಜಾರ್ಥದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಅರ್ಥಪೂರ್ಣ.

ಇದೀಗ ಹೆಚ್ಚುತ್ತಿರುವ ಚುನಾಯಿತ ಸರ್ವಾಧಿಕಾರದ (ಅಟೊಕ್ರಸಿ) ಅಪಾಯಗಳನ್ನು ಜನರಿಗೆ ಮನವರಿಕೆ ಮಾಡುವುದನ್ನು ಗುರಿಯನ್ನಾಗಿಸಿಕೊಳ್ಳಬೇಕಾಗಿದೆ. 2024 ರ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಘೋಷಣೆಯಾಗಿ 'ಆಡಳಿತ ಮತ್ತು ನಾಗರೀಕರ ಒಳಗೊಳ್ಳುವಿಕೆಗಾಗಿ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ನ್ನು ಹೊರಗಿಡುವುದು' ಎಂದು ಗುರುತಿಸಲಾಗಿದೆ. ಇದು ತುಂಬಾ ಕ್ರಾಂತಿಕಾರಿ ತಂತ್ರಜ್ಞಾನವಾದ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಪ್ರಜಾಪ್ರಭುತ್ವದ ಆಶಯಗಳಿಗೆ ತಂದೊಡ್ಡಬಹುದಾದ ಅಪಾಯಗಳ ಕುರಿತಂತೆ ಎಚ್ಚರಿಸುವ ಒಂದು ಬಗೆಯಾಗಿದೆ. ಹೀಗಿರುವಾಗ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಕಂಡ ಪ್ರಜಾಪ್ರಭುತ್ವದ ವ್ಯಾಖ್ಯಾನ ಗ್ರಹಿಕೆ ಮತ್ತು ಕನಸುಗಳನ್ನು ಜಾಗತಿಕ ಸಮುದಾಯಕ್ಕೆ ಪರಿಣಾಮಕಾರಿಯಾಗಿ ತಿಳಿಸಬೇಕಿದೆ. 2008 ರಿಂದ ಐ.ಪಿ.ಯು ವಾರ್ಷಿಕವಾಗಿ ಘೋಷಿಸಿದ ಘೋಷಣೆಗಳನ್ನು ಗಮನಿಸಿದರೆ ಇವು ಅಂಬೇಡ್ಕರ್ ಕನಸಿನ ಪ್ರಜಾಪ್ರಭುತ್ವದ ಲಕ್ಷಣಗಳಂತೆ ಕಾಣುತ್ತಿದೆ.



ಅರುಣ್ ಜೋಳದ ಕೂಡ್ಲಿಗಿ

Scan For Digital Colourful
HAMPI TIMES E-paper

ಜಾಗತಿಕವಾಗಿ 2024 ನ್ನು ಪ್ರಜಾಪ್ರಭುತ್ವದ ನಿರ್ಣಾಯಕ ವರ್ಷವನ್ನಾಗಿ ಜಗತ್ತಿನಾದ್ಯಾಂತ ಚರ್ಚಿಸಲಾಗುತ್ತಿದೆ. ಕಾರಣ ಜಗತ್ತಿನ ಬಹುದೊಡ್ಡ ಪ್ರಭಾವಿ 60 ರಷ್ಟು ರಾಷ್ಟ್ರಗಳು ಈ ಒಂದು ವರ್ಷದಲ್ಲಿ ಚುನಾವಣೆ ಎದುರಿಸುತ್ತಿವೆ. ಕೆಲವು ದೇಶಗಳು ಈಗಾಗಲೆ ಚುನಾವಣೆ ಎದುರಿಸಿ ಫಲಿತಾಂಶ ಬಂದಿದೆ, ಅಮೇರಿಕಾದಂತಹ ಮತ್ತೆ ಕೆಲವು ರಾಷ್ಟ್ರಗಳು ಚುನಾವಣೆಗೆ ಸಿದ್ಧಗೊಳ್ಳುತ್ತಿವೆ. ಈ ವರ್ಷದ ಅಂತ್ಯದಲ್ಲಿ ಎಲ್ಲಾ 60 ದೇಶಗಳ ಚುನಾವಣೆಗಳ ಫಲಿತಾಂಶಗಳನ್ನು ವಿಶ್ಲೇಷಣೆ ಮಾಡುತ್ತಾ ಜಾಗತಿಕವಾಗಿ ಹೇಗೆ ಪ್ರಜಾಪ್ರಬುತ್ವ ಉಸಿರಾಡುತ್ತಿದೆ ಎನ್ನುವುದನ್ನು ಗುರುತಿಸಬೇಕಾಗಿದೆ.

ಬಾಬಾ ಸಾಹೇಬರು ಪ್ರಜಾಪ್ರಭುತ್ವದ ಬಗ್ಗೆ ಬಹಳ ಆಳವಾಗಿ ಚಿಂತಿಸಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಚರ್ಚೆ ಮಾಡುವಾಗಲೆಲ್ಲಾ ಜಾಗತಿಕ ರಾಜಕೀಯ ವಿದ್ಯಮಾನಗಳನ್ನು ಉದಾಹರಣೆಯಾಗಿ ತರುತ್ತಾರೆ. ಅಂದರೆ ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಚಿಂತನೆ ಜಾಗತಿಕ ದಮನಕ್ಕೊಳಗಾದ ಜನಸಮುದಾಯಗಳ ಸಮತೆಯ ಕನಸಾಗಿದೆ. ಈ ಕಾರಣಕ್ಕಾಗಿ ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಅರಿವನ್ನು ಭಾರತಕ್ಕೆ ಮಾತ್ರ ಸೀಮಿತಗೊಳಿಸಿ ನೋಡಬೇಕಿಲ್ಲ, ಅದನ್ನು ಜಾಗತಿಕ ಅರಿವಿನ ನೆಲೆಯಲ್ಲಿ ವಿಸ್ತರಿಸಬೇಕಿದೆ. ಇದು ಅಂಬೇಡ್ಕರ್ ಚಿಂತನೆಯನ್ನು ಜಾಗತಿಕವಾಗಿ ವಿಸ್ತರಿಸಲು ಇರುವ ಒಂದು ಬಹುಮುಖ್ಯ ಸಂದರ್ಭ ಕೂಡ. ಒಮ್ಮೆ ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ವ್ಯಾಖ್ಯಾನವನ್ನು ವರ್ಷದ ಥೀಮ್ ಆಗಿಸಲು ಜಾಗತಿಕ ಅಂಬೇಡ್ಕರ್ ವಾದಿ ಇಂಟಲೆಕ್ಚವಲ್ ಸಮುದಾಯ ಹಕ್ಕೊತ್ತಾಯ ಮಂಡಿಸಬೇಕಾಗಿದೆ.

ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಕನಸಿನ ಬೇರುಗಳು ಬೌದ್ಧಧಮ್ಮದಲ್ಲಿಯೂ ಬುದ್ಧನ ಆಶಯಗಳಲ್ಲಿಯೂ ಇವೆ. ಬುದ್ಧ ಒಮ್ಮೆ ಬಿಕ್ಕುಗಳಿಗೆ ಉಪದೇಶಿಸುವಾಗ ರಾಜ ಒಳ್ಳೆಯವನಾಗಿದ್ದರೆ, ಪ್ರಜೆಗಳೂ ಒಳ್ಳೆಯವರಾಗಿರುತ್ತಾರೆ, ರಾಜನು ಕ್ರೂರಿಯಾದರೆ, ಪ್ರಜೆಗಳೂ ನಿಧಾನಕ್ಕೆ ಕ್ರೂರಿಗಳಾಗುತ್ತಾರೆ ಎನ್ನುವುದನ್ನು ವಿಸ್ತರಿಸಿ ದೀರ್ಘವಾಗಿ ಮಾತನಾಡುತ್ತಾರೆ. ಇದರಲ್ಲಿ ಒಬ್ಬ ರಾಜ ಪ್ರಜಾಪ್ರಭುತ್ವವಾದಿಯಾಗಿರಬೇಕು ಸರ್ವಾಧಿಕಾರಿಯಾಗಿರಬಾರದು ಎನ್ನುವ ಆಶಯವಿದೆ. ಮುಂದುವರಿದು ಮಗಧ ರಾಜ್ಯದ ಅಜಾತಶತ್ರುವಿನ ಮಗ ವಿದೇಹನು ವೃದ್ಧೀನರ ಮೇಲೆ ದಾಳಿ ಮಾಡಲು ಮುಂದಾದಾಗ ಬುದ್ಧನ ಸಲಹೆಗಾಗಿ ಕಾಯುತ್ತಾನೆ. ಆಗ ಬುದ್ಧನು 'ವೃದ್ಧೀನರು ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟು ಅದನ್ನು ಅನುಸರಿಸುತ್ತಾರೋ, ಅಲ್ಲಿಯವರೆಗೆ ಅವರ ಸಂಸ್ಥಾನಕ್ಕೆ ಯಾವ ಅಪಾಯವೂ ಇಲ್ಲ' ಎಂದು ಹೇಳುತ್ತಾನೆ. ಅಂದರೆ ಪರೋಕ್ಷವಾಗಿ ವಿದೇಹನಿಗೆ ನೀನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿಲ್ಲ ಹಾಗಾಗಿ ನಿನ್ನ ಸಂಸ್ಥಾನಕ್ಕೆ ಅಪಾಯ ತಪ್ಪಿದ್ದಲ್ಲವೆಂದು ಮನವರಿಕೆ ಮಾಡುತ್ತಾರೆ. ಇದನ್ನು ಅಂಬೇಡ್ಕರ್ ಬುದ್ಧ ಮತ್ತು ಆತನ ಧಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಹೀಗೆ ಬುದ್ಧನ ನೇರ ಉಪದೇಶಗಳಲ್ಲದೆ, ತರ್ಕ, ಪ್ರಯೋಗ, ಆನ್ವಯಿಕತೆಯ ಸೂತ್ರವಿರುವ ಬೌದ್ಧ ಧಮ್ಮದ ವೈಜ್ಞಾನಿಕ ಮನೋಭಾವವನ್ನು ಒಳಗೊಂಡಂತೆ, ಪ್ರಶ್ನಿಸದೆ ಪರೀಕ್ಷಿಸದೆ ನಿನ್ನ ಅನುಭವಕ್ಕೆ ಬರದೆ ಯಾವುದನ್ನೂ ಒಪ್ಪಿಕೊಳ್ಳಬೇಡ, ಅಗತ್ಯಕ್ಕಿಂತ ಹೆಚ್ಚಿನದನ್ನು ಕೂಡಿಡಬೇಡ ಎನ್ನುವ ಮೂಲಭೂತ ತತ್ವಗಳನ್ನು ಒಳಗೊಂಡಂತೆ ಒಟ್ಟಾರೆ ಬೌದ್ಧ ಧಮ್ಮದಲ್ಲಿ ಆಳವಾಗಿ ಬೇರೂರಿ ರುವುದೆ ಪ್ರಜಾಪ್ರಭುತ್ವ ತತ್ವವಾಗಿದೆ. ಬಾಬಾ ಸಾಹೇಬರು ಬೌದ್ಧ ಧಮ್ಮ ಸ್ವೀಕರಿಸಲು ಈ ಅಂಶವೂ ಕಾರಣವಾಗಿದೆ. ಹಾಗಾಗಿ ಅಂಬೇಡ್ಕರ್ ಬೌದ್ಧ ದಮ್ಮಕ್ಕೆ ಮತಾಂತರ ಆಗುವ ಮೂಲಕ ಪ್ರಜಾಪ್ರಭುತ್ವಕ್ಕೆ ಮತಾಂತರವಾದರು ಎಂದು ಹೇಳಬಹುದು.



ಅಂಬೇಡ್ಕರ್ ಜಾಗತಿಕವಾಗಿ ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುವಾಗ ಆರ್ಥಿಕ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ. ಸಂವಿಧಾನ ರಚನಾ ಸಂಭೆಯಲ್ಲಿ 'ರಾಜಕೀಯ ಪ್ರಜಾಪ್ರಭುತ್ವವು ಸಂವಿಧಾನದಲ್ಲಿ ಸ್ಥಾಪಿತವಾಗಿರುವುದು ಒಂದು ನಿರಂತರ ಸರ್ವಾಧಿಕಾರತ್ವ ಅಥವಾ ಯಾವುದೇ ಪ್ರತ್ಯೇಕ ಜನರ ಸಂಸ್ಥಾನವನ್ನು ಸ್ಥಾಪಿಸುವುದಲ್ಲ, ಬದಲಾಗಿ ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಮೇಲೆ, ಒಂದು ಆದರ್ಶ ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಸಹ ನಮ್ಮ ಕನಸಾಗಿದೆ' ಎನ್ನುತ್ತಾರೆ. ಮುಂದುವರಿದು 'ಜನರು ರಾಜಕೀಯದಲ್ಲಿ ಪ್ರವೇಶಿಸಿ ಅಧಿಕಾರವನ್ನು ಸ್ವಾಧೀನ ಪಡಿಸಿಕೊಳ್ಳುವುದಷ್ಟೇ ಅಲ್ಲ, ಯಾರು ಸರಕಾರದ ರಚನೆ ಮಾಡುವರೋ ಅಂಥವರ ಮುಂದೆ ಈ ಸಂವಿಧಾನ ಒಂದು ಆದರ್ಶವನ್ನು ಮುಂದಿಡುತ್ತದೆ; ಆ ಆದರ್ಶವೇ 'ಆರ್ಥಿಕ ಪ್ರಜಾಪ್ರಭುತ್ವ.' ಎನ್ನುತ್ತಾರೆ. ಜಗತ್ತಿನಲ್ಲಿ ಹೆಚ್ಚುತ್ತಿರುವ ಚುನಾಯಿತ ಸರ್ವಾಧಿಕಾರವನ್ನು ನಿಯಂತ್ರಿಸುತ್ತಿರುವುದು ಕ್ರೋನಿಕ್ಯಾಪಿಟಲ್ ಶಕ್ತಿಗಳು. ಇದು ಭಾರತಕ್ಕೂ ಅನ್ವಯವಾಗುತ್ತದೆ. ಭಾರತದಲ್ಲಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಯ ಅಂತರನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ದೇಶದಲ್ಲಿ ಅಂಬೇಡ್ಕರ್ ಕನಸಿನ ಆರ್ಥಿಕ ಪ್ರಜಾಪ್ರಭುತ್ವ ಇದೆಯೇ ಎನ್ನುವ ಪ್ರಶ್ನೆ ಎದುರಾಗುತ್ತದೆ.

ಬಾಬಾ ಸಾಹೇಬರು ಪ್ರಜಾಪ್ರಭುತ್ವದ ಬಗ್ಗೆ ಆಳವಾಗಿ ಚಿಂತಿಸಿ, ಅವರ ತಿಳಿವನ್ನು ಹರಳುಗಟ್ಟಿಸಿ ಪ್ರಜಾಪ್ರಭುತ್ವಕ್ಕೆ ಒಂದು ವ್ಯಾಖ್ಯಾನ ಕೊಡುತ್ತಾರೆ, 'ರಕ್ತಪಾತವಿಲ್ಲದೆ ಪಜೆಗಳ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸರ್ಕಾರದ ಒಂದು ಸ್ವರೂಪ ಮತ್ತು ಒಂದು ವಿಧಾನ' ವೆ ಪ್ರಜಾಪ್ರಭುತ್ವ ಎನ್ನುತ್ತಾರೆ. ಮುಂದುವರಿದು ವಿಶ್ಲೇಷಿಸುತ್ತಾ, 'ಜನಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದಕ್ಕಾಗಿ, ಪಜಾಪ್ರಭುತ್ವವನ್ನು ನಡೆಸುತ್ತಿರುವವರಿಗೆಅದರಿಂದಸಹಾಯವಾಗುವುದಾದರೆ, ಆ ಬದಲಾವಣೆಯನ್ನು ರಕ್ತಪಾತವಿಲ್ಲದೆ ಜನಗಳು ಒಪ್ಪಿಕೊಳ್ಳುವುದಾದರೆ, ಆಗ ಅದು ಪ್ರಜಾಪ್ರಭುತ್ವ. ಅದೇ ನಿಜವಾದ ಪರೀಕ್ಷೆ. ಬಹುಶಃ ಇದು ಅತ್ಯಂತ ಕಠಿಣವಾದ ಪರೀಕ್ಷೆ. ಅಂದರೆ ನೀವು ಒಂದು ವಸ್ತುಸಂಗತಿಯ ಗುಣಮಟ್ಟವನ್ನು ಪರೀಕ್ಷಿಸುವುದಾದರೆ, ಅದನ್ನು ಅತ್ಯಂತ ಕಠಿಣ ಪರೀಕ್ಷೆಗೆ ಒಳಪಡಿಸಬೇಕು' ಎನ್ನುತ್ತಾರೆ. ಅಚಿತಿಮವಾಗಿ ಜನರ ಬದುಕಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕ್ರಾಂತಿಕಾರಿ ಬದಲಾವಣೆ ಆಗದ ಹೊರತು ಅದು ಪ್ರಜಾಪ್ರಭುತ್ವ ಸರಕಾರ ಆಗಲಾರದು ಎನ್ನುತ್ತಾರೆ.

ಅಂಬೇಡ್ಕರ್ ಅವರು 1952 ಡಿಸೆಂಬರ್ 22 ರಂದು ಪೂನಾದಲ್ಲಿ ಜಿಲ್ಲಾ ಕಾನೂನು ಗ್ರಂಥಾಲಯದಲ್ಲಿ ಎಲ್.ಆರ್ ಘೋಕಲೆ ಅವರ ಭಾವಚಿತ್ರ ಅನಾವರಣ ಮತ್ತು ಇಬ್ಬರು ಹಿರಿಯ ವಕೀಲರುಗಳು ಗ್ರಂಥಾಲಯಕ್ಕೆ ಕೊಟ್ಟ ಪುಸ್ತಕಗಳ ಕೊಡುಗೆಯ ಕಾರ್ಯಕ್ರಮದಲ್ಲಿ 'ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಇರುವ ಮೂಲಭೂತ ನಿಯಮಗಳು' ಎನ್ನುವ ಭಾಷಣ ಮಾಡುತ್ತಾರೆ. ಇದರಲ್ಲಿ ಮೊದಲನೆಯದಾಗಿ ಸಮಾಜದಲ್ಲಿ ಕಣ್ಣಿಗೆ ರಾಚುವ ಅಸಮಾನತೆ ಇರಬಾರದು. ಎಲ್ಲಾ ಸವಲತ್ತುಗಳ ಪಡೆದ ಆಳುವ ವರ್ಗ, ಎಲ್ಲಾ ರೀತಿಯಿಂದ ತುಳಿಯಲ್ಪಟ್ಟ ವರ್ಗವಿರಬಾರದು. ಈ ಅಂತರ ಹೆಚ್ಚಾದರೆ ಇದರ ಹೊಟ್ಟೆಯೊಳಗೆ ಹಿಂಸೆಯ ಬೀಜ ಮೊಳೆಯುತ್ತದೆ ಎನ್ನುತ್ತಾರೆ. ಎರಡನೆಯದಾಗಿ ಪ್ರಭಲ ವಿರೋಧ ಪಕ್ಷ ಇರಬೇಕು, ಆಡಳಿತ ಪಕ್ಷವನ್ನು ಕಠಿಣ ಪರೀಕ್ಷೆಗೆ ಒಳಪಡಿಸುವ ಒಂದು ಪ್ರಭಲ ವಿರೋಧ ಪಕ್ಷ ಇದ್ದಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತದೆ ಎನ್ನುತ್ತಾರೆ. ಮೂರನೆಯದಾಗಿ ಆಡಳಿತ ಮತ್ತು ಕಾನೂನಿನ ಮುಂದೆ ಎಲ್ಲರೂ ಸಮಾನವಾಗಿರಬೇಕು. ನಾಲ್ಕನೆಯದು ಮತ್ತು ಅತ್ಯಂತ ಮುಖ್ಯವಾದ ಅಂಶವೆ 'ಸಂವಿಧಾನಿಕ ನೈತಿಕತೆ' ಸಂವಿಧಾನದ ಮೌಲ್ಯಗಳನ್ನು ಮೀರಿದಾಗ, ಒಂದು ಗಂಭೀರ ತಪ್ಪು ಮಾಡಿದಾಗ ಆಗುವ ವೇದನೆ ಮನುಷ್ಯನಿಗೆ ಆಗಬೇಕು. ಮುಂದೆ ಇಂತಹ ತಪ್ಪು ಮಾಡಲಾರೆ ಎನ್ನುವ ನಿರ್ಧಾರಕ್ಕೆ ಬರಬೇಕು. ಈ ಬಗೆಯ ಸಂವಿಧಾನಿಕ ನೈತಿಕತೆ ಜನರಲ್ಲಿ ನೆಲೆಗೊಂಡಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ.

ಕೊನೆಯ ದಿನಗಳಲ್ಲಿ ಅಂಬೇಡ್ಕರ್ ಪ್ರಜಾಪ್ರಭುತ್ವದ ಆಶಯಗಳಿಗೆ ಆತ್ಯಂತಿಕವಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾರೆ. 1936 ರಲ್ಲಿ ಅಂಬೇಡ್ಕರ್ ವರ್ಗಪ್ರಜ್ಞೆಯಲ್ಲಿ ಜಾಗತಿಕ ಕಾರ್ಮಿಕರ ಸಂಘಟನೆಯ ಜರೆ ರಾಜಕೀಯ ಸಮೀಕರಣದ ಕನಸೊತ್ತು, ಜಾತಿ ತರತಮದ ಅಸಮಾನತೆಯ ಆಧಾರದ ಮೇಲೆ ಕಾರ್ಮಿಕರ ವಿಭಜನೆಯನ್ನು ಆಧರಿಸಿ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' (ಐ.ಎಲ್.ಪಿ) ಸ್ಥಾಪಿಸುತ್ತಾರೆ. ಮುಂದೆ ಭಾರತದ ಜಾತಿಪ್ರಜ್ಞೆಯನ್ನು ಆಧರಿಸಿ ಅಸ್ಪೃಶ್ಯ ದಮನಿತ ಸಮುದಾಯಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು 1947 ರಲ್ಲಿ 'ಅಖಿಲ ಭಾರತ ಶೆಡ್ಯೂಲ್ಡ್ ಕಾಸ್ಟ್ಸ್ ಫೆಡರೇಶನ್' (ಎಸ್.ಸಿ.ಎಫ್) ಎಂಬ ರಾಜಕೀಯ ಪಕ್ಷವನ್ನೂ ಸ್ಥಾಪಿಸುತ್ತಾರೆ. ಕೊನೆಯದಾಗಿ ಸೆಪ್ಟಂಬರ್ 30, 1956 ರಲ್ಲಿ ಅಂಬೇಡ್ಕರ್ ಒಂದು ರಾಷ್ಟ್ರೀಯ ಪಕ್ಷದ ನೆಲೆಯಲ್ಲಿ ಸಂವಿಧಾನವನ್ನುಬಲಗೊಳಿಸಲು ಪ್ರಜಾಪ್ರಭುತ್ವದ ಆಶಯಗಳನ್ನು ನೆಲೆಗೊಳಿಸುವ ಕನಸೊತ್ತು 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' (ಆರ್.ಪಿ.ಐ) ಸ್ಥಾಪಿಸಿದರು. ಭಾರತೀಯ ಸಂವಿಧಾನವನ್ನು ನಿಜವಾದ ಅರ್ಥದಲ್ಲಿ ಜಾರಿಗೊಳಿಸಲು ಈ ಪಕ್ಷವನ್ನು ಸ್ಥಾಪಿಸಲಾಗಿದೆ, ಸಮಾನತೆ, ಸ್ವಾತಂತ್ರ್ಯ ಮತ್ತು ಬಂಧುತ್ವವೇ ಅದರ ಮುಖ್ಯ ಗುರಿ ಎಂದು ಅಂಬೇಡ್ಕರ್ ಹೇಳುತ್ತಾರೆ. ಆರ್.ಪಿ.ಐ ಪಕ್ಷಕ್ಕೆ ಆಹ್ವಾನಿಸುವಾಗ ಬರೆದ ತೆರೆದ ಪತ್ರದಲ್ಲಿ ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಬಗೆಗಿನ ತಾತ್ವಿಕ ಬಿಕ್ಕಟ್ಟುಗಳನ್ನು ತುಂಬಾ ಸೂಕ್ಷ್ಮವಾಗಿ ವಿವರಿಸುತ್ತಾರೆ. ರಾಜಸತ್ತೆಯನ್ನು ಕೊನೆಗೊಳಿಸಲೆಂದು ಪ್ರಜಾಪ್ರಭುತ್ವದ ಜನ್ಮತಳೆದರೂ, ಇದೀಗ ಪ್ರಜಾಪ್ರಭುತ್ವದ ಗುರು 'ಜನ ಕಲ್ಯಾಣ' ಎನ್ನುತ್ತಾರೆ.

ಮೇಲೆ ಚರ್ಚಿಸಿದಂತೆ ಅಸಮಾನತೆ ಇರಕೂಡದು, ಪ್ರಭಲ ವಿರೋಧ ಪಕ್ಷವಿರಬೇಕು, ಕಾನೂನಿನ ಎದುರು ಸಮತೆ, ಸಂವಿಧಾನಿಕ ನೈತಿಕತೆ ಜತೆಗೆ ಪ್ರಜಾಪ್ರಭುತ್ವದ ಹೆಸರಲ್ಲಿ ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರ ಕತ್ತು ಹಿಸುಕುವ ಕೆಲಸ ಆಗಬಾರದು ಎನ್ನುತ್ತಾರೆ. ರಾಜ್ಯಾಡಳಿತದಲ್ಲಿ ನೈತಿಕತೆ ಇರಬೇಕು, ಕಡೆಯದಾಗಿ ವಿಚಾರವಂತ ಜನಸಮುದಾಯ (ಕಣಭಟುಭಿ ಅಂಟಿಭಿಜಟಿಭಿಜ) ಇರಬೇಕು ಎನ್ನುತ್ತಾರೆ. ಅಂದರೆ ಸಮಾಜದಲ್ಲಿ ನಡೆಯುವ ಅನ್ಯಾಯ ಅಕ್ರಮಗಳು ಎಲ್ಲರಿಗೂ ಒಂದೇ ಪರಿಣಾಮ ಬೀರುವುದಿಲ್ಲ. ಮೇಲ್ಜಾತಿ ಮೇಲ್ವರ್ಗಕ್ಕೆ ಕಡಿಮೆ ಪರಿಣಾಮ ಬೀರಿದರೆ, ಕೆಳಜಾತಿ ಮತ್ತು ದಮನಿತ ಸಮುದಾಯಗಳಿಗೆ ತೀವ್ರ ಪರಿಣಾಮ ಬೀರುತ್ತವೆ. ಇಂತಹ ಸಂದರ್ಭದಲ್ಲಿ ಪ್ರಜ್ಞಾವಂತ ಜನರು ಮೌನತಾಳಬಾರದು. ಮಿತಿ ಮೀರಿದ ಅನ್ಯಾಯ ಅಕ್ರಮ ದೌರ್ಜನ್ಯಗಳು ನಡೆದಾಗ ವ್ಯಾಪಕವಾಗಿ ಪ್ರತಿರೋಧ ಒಡ್ಡಬೇಕು. ಸಂಘಟಿತವಾಗಿ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಜೀವಂತವಾಗಿರುತ್ತದೆ.

World inequality database ಸಂಸ್ಥೆಯು ಮಾರ್ಚ್, 18, 2024 ರಂದು ಈ ಸಂಶೋಧನ ವರದಿ ಪ್ರಕಟಿಸಿದೆ. 2022–23 ರಲ್ಲಿ 46.12 ಕೋಟಿ ಜನರು ಬಡವರಾಗಿದ್ದು ಅವರ ಒಟ್ಟು ವಾರ್ಷಿಕ ಆದಾಯವು ಶೇ.15 ರಷ್ಟಿದೆ, ಒಟ್ಟು ಸಂಪತ್ತು ಶೇ.6.4 ರಷ್ಟಿದೆ. ಇದೀಗ ದೇಶದ ಶ್ರೀಮಂತರ ಸಂಖ್ಯೆ 9.23 ಕೋಟಿಯಾಗಿದ್ದು ಇವರ ಪ್ರಮಾಣ ಶೇ10 ರಷ್ಟಿದೆ. ವಾರ್ಷಿಕ ಆದಾಯದಲ್ಲಿ ಇವರ ಪಾಲು ಶೇ.57.7 ರಷ್ಟು ಹಾಗೂ ಶೇ.65 ರಷ್ಟು ಸಂಪತ್ತು ಹೊಂದಿದ್ದಾರೆ. ಈ ವಿವರ ನೋಡಿದರೆ ಅಂಬೇಡ್ಕರ್ ಹೇಳುವ ಆರ್ಥಿಕ ಪ್ರಜಾಪ್ರಭುತ್ವ ನೆಲಸಮವಾಗಿರುವುದು ಕಾಣುತ್ತಿದೆ. ಹೀಗೆ ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಕನಸುಗಳನ್ನು ನೋಡುತ್ತಾ ಹೋದರೆ, ಅವರ ಕನಸಿನ ಪ್ರಜಾಪ್ರಭುತ್ವ ಇಂದು ಅಳಿವಿನಂಚಿನಲ್ಲಿದೆ. ಇಂದು ಅಂಬೇಡ್ಕರ್ ಅವರನ್ನು ಜೀವಂತಗೊಳಿಸುವುದು ಅಂದರೆ ಪ್ರಜಾಪ್ರಭುತ್ವದ ಆಶಯಗಳನ್ನು ಬಲಗೊಳಿಸಲು ಹೋರಾಟ ನಡೆಸುವುದೇ ಆಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055